III. ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಸಚಿವರ ಪರವಾಗಿ)

2002ರ ಕರ್ನಾಟಕ ಕೈಗಾರಿಕೆಗಳ(ಸೌಲಭ್ಯ) ಅಧಿನಿಯಮ 21(2)ರ ಪ್ರಕರಣದ ಮೇರೆಗೆ:-

2003ರ ಕರ್ನಾಟಕ ಕೈಗಾರಿಕೆಗಳ(ಸೌಲಭ್ಯ) ನಿಯಮಗಳನ್ನು ರಚಿಸಿ ದಿನಾಂಕ 04.08.2004 ರಂದು ಹೊರಡಿಸಲಾದ ಸಿಐ:208:ಎಸ್‌ಪಿಐ:2002ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

3. ಶಾಸನ ರಚನೆ

6) ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು(ಅನುಬಂಧ-1)

ಈ ಭಾಷಣವು ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಪರಿಷ್ಕರಿಸಲ್ಪಟ್ಟಿರುತ್ತದೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ಕ್ಕೆ ರಾಷ್ಟ್ರಪತಿಗಳ ಅಂಕಿತ ದೊರೆತ ಮೇಲೆ ಅಫೀಶಿಯಲ್ ಗೆಜೆಟ್‌ನಲ್ಲಿ ಪ್ರಕಟ ಮಾಡಿದ್ದೇವೆ. ಇವೆಲ್ಲಾ ಅಂಕಿತ ಸಿಕ್ಕಿದ ಮೇಲೆ, ರಾಷ್ಟ್ರದಲ್ಲಿ ತೆರಿಗೆ ಪದ್ಧತಿಯನ್ನು ಸುಧಾರಣೆ ಮಾಡುವುದಕೋಸ್ಕರವಾಗಿ ಹೊಸ ವ್ಯಾಟ್ ಪದ್ಧತಿಗೆ ಹೋಗುತ್ತಿದ್ದೇವೆ. ಇಲ್ಲಿಯವರೆಗೆ ನಾವು ಮಾರಾಟ ತೆರಿಗೆ ಪದ್ಧತಿಯನ್ನು ಅನುಸರಿಸಿಕೊಂಡು ತೆರೆಗೆ ವಸೂಲಿ ಮಾಡುವ ಕೆಲಸ ಮಾಡುತ್ತಿದ್ದೆವು. ಮಾರಾಟ ತೆರಿಗೆ ಪದ್ಧತಿಯಿಂದ Value Added Tax ಪದ್ದತಿಗೆ ಹೋಗಬೇಕೆಂದು ಅನೇಕ ವರ್ಷಗಳಿಂದ ರಾಷ್ಟ್ರಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಈ ಚರ್ಚೆ ನಡೆದು ಇದಕ್ಕೆ ಒಂದು ರೂಪ ಕೊಡುವುದಕೋಸ್ಕರವಾಗಿ ಅದನ್ನು ಜಾರಿ ಮಾಡಲು ಏನೆಲ್ಲಾ ಕ್ರಮಗಳನ್ನು ಅನುಸರಿಸಬೇಕು, ಇದಕ್ಕೆ ಎಲ್ಲಾ ರಾಜ್ಯಗಳು ಒಪ್ಪಿಗೆ ಕೊಟ್ಟರೆ ಏಕ ರೂಪದ ತೆರಿಗೆ ಪದ್ಧತಿಯನ್ನು ತರಲು ಸಾಧ್ಯವಾಗುತ್ತದೆ ಎನ್ನುವುದಕೋಸ್ಕರ ರಾಷ್ಟ್ರಮಟ್ಟದಲ್ಲಿ ಒಂದು ಎಂಪವರ್ಡ್ ಕಮಿಟಿ ರಚನೆಯಾಯಿತು. ರಾಜ್ಯಗಳ ಹಣಕಾಸು ಸಚಿವರುಗಳು ಅದರ ಸದಸ್ಯರುಗಳು. ಕರ್ನಾಟಕದವರೂ ಅದರಲ್ಲಿ ಒಬ್ಬ ಸದಸ್ಯರಾಗಿದ್ದಾರೆ. ಈ ಕಮಿಟಿಗೆ ಪಶ್ಚಿಮಬಂಗಾಳದ ಹಣಕಾಸು ಸಚಿವರಾದ ಆಶೀಮ್‌ದಾಸ್‌ಗುಪ್ತಾ ರವರು ಅಧ್ಯಕ್ಷರು. ಇದರ ಬಗ್ಗೆ ಬಹಳ ಡೆಲಿಬರೇಷನ್ಸ್ ಆಗಿವೆ. ಏಕೆಂದರೆ ಮಾರಾಟ ತೆರಿಗೆ ಪದ್ಧತಿಯೇನಿದೆ ಅದು ರಾಜ್ಯ ಸರ್ಕಾರಗಳಿಗೆ ಸೇರುತ್ತದೆ. ಸ್ಟೇಟ್ ಲಿಸ್ಟ್‌ನಲ್ಲಿ ಬರತಕ್ಕದ್ದು. ಕೇಂದ್ರ ಸರ್ಕಾರಕ್ಕೆ ರಾಜ್ಯಗಳು ಹೀಗೇ ತೆರಿಗೆ ವಸೂಲಿ ಮಾಡಬೇಕು ಎಂದು ಹೇಳಲು ಯಾವುದೇ ಅಧಿಕಾರ ಇಲ್ಲ. ಅದಕ್ಕೋಸ್ಕರವಾಗಿ ಎಲ್ಲಾ ರಾಜ್ಯಗಳೂ ಒಪ್ಪಿಗೆಯಾಗತಕ್ಕ ಒಮ್ಮತದ ಅಭಿಪ್ರಾಯಕ್ಕೆ ಬರತಕ್ಕ ಕೆಲಸವಾಗಬೇಕಾಗುತ್ತದೆ, ಅದಕ್ಕೋಸ್ಕರ ಎಂಪವರ್ ಕಮಿಟಿ ರಚನೆಯಾದದ್ದು, ಈ ಸಮಿತಿ ರಚನೆ ಆದಮೇಲೆ ಬಹಳಷ್ಟು

ಡೆಲಿಬ್ರೇಷನ್ಸ್‌ಗಳೂ ಆಗಿವೆ. ಅನೇಕ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಯ ತೆರಿಗೆಗಳು ಇವೆ. ನಮ್ಮ ರಾಜ್ಯದಲ್ಲಿ 4, 8, 12 ಇದೆ, ಅನಂತರ ಸ್ಪೆಶಲ್ ರೇಟ್‌ಗಳು ಕೂಡ ಇದೆ. ಹಾಗೆ ಬೇರೆ ಬೇರೆ ರಾಜ್ಯದಲ್ಲಿ ಮಾರಾಟ ತೆರಿಗೆ ಬೇರೆ ಬೇರೆ ರೇಟ್‌ನಲ್ಲಿ ಇದೆ. ಒಂದು ವಾದವೇನು ನಡೆಯುತ್ತಿತ್ತೆಂದರೆ, ಮಾರಾಟ ತೆರಿಗೆಯನ್ನು ವಿಧಿಸತಕ್ಕಂಥ, ಬೇರೆ ಬೇರೆ ತೆರಿಗೆಗಳನ್ನು ವಿಧಿಸತಕ್ಕಂಥ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದ್ದದ್ದರಿಂದ ಆಯಾಯ ರಾಜ್ಯಗಳು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ತೆರಿಗೆ ರೇಟನ್ನು ಮಾಡುತ್ತಿದ್ದವು. ಮಹಾರಾಷ್ಟ ತಮಿಳುನಾಡು, ಕೇರಳ ಇರಬಹುದು, ಒಂದು ತೊಂದರೆ ಏನಾಗುತ್ತಿತ್ತು ಎಂದರೆ ಒಂದು ರೀತಿಯ unhealthy competition ಆಗುತ್ತಿತ್ತು. ನಾವು ಪೆಟ್ರೋಲ್‌ಗೆ 28 ಪರ್‌ಸೆಂಟ್ ಮಾರಟ ತೆರಿಗೆ ಹಾಕಿದರೆ ಅವರು ಕಡಿಮೆ ಮಾಡುವುದು, ನಾವು ಅಕ್ಕಿಗೆ ಯಾವುದೇ ತೆರಿಗೆ ಹಾಕದಿದ್ದರೆ ಇನ್ನೊಬ್ಬರು ತೆರಿಗೆ ಹಾಕುವುದು, ನಾವು ನಾಲ್ಕು ಪರ್‌ಸೆಂಟ್ ತೆರಿಗೆ ಹಾಕಿದರೆ ಅವರು ತೆರಿಗೆಯೇ ಇಲ್ಲವೆಂದು ಹೇಳುವುದು, ಇದು ವ್ಯಾಪಾರದ ಸ್ಥಾನ ಪಲ್ಲಟವಾಗಲು ಕಾರಣ ಆಗುತ್ತಿತು. Trade deviation ಆಗುತ್ತಿತ್ತು. ಜನರ ಎಲ್ಲಿ ಕಡಿಮೆ ತೆರಿಗೆ ಇರುತ್ತದೆ ಅಲ್ಲಿಗೆ ಹೋಗಿ ತೆಗೆದುಕೊಂಡು ಬರುತ್ತಿದ್ದರು. ಉದಾಹರಣೆಗೆ: ಕಾರುಗಳು, ಬೇರೆ ರಾಜ್ಯದಲ್ಲಿ ಕಾರುಗಳ ಬೆಲೆ ಕಡಿಮೆ ಇದ್ದರೆ ಅಲ್ಲಿಂದ ತೆಗೆದುಕೊಂಡು ಬರುವುದು, ಆದ್ದರಿಂದ ನಾವು ಈ ಸಾರಿ ಸದನದಲ್ಲಿ ಒಂದು ಸ್ಪೆಶಲ್ ಎಂಟ್ರಿ ಟ್ಯಾಕ್ಸನ್ನು ಕೂಡ ಹಾಗಿದೆವು. ಇಲ್ಲಿ ಎಷ್ಟು ತೆರಿಗೆ ಇದೆಯೋ ಅಷ್ಟನ್ನು ಕೊಟ್ಟೇ ಒಳಕ್ಕೆ ತರಬೇಕು ಎಂದು ಮಾಡಿದೆವು. ಆದ್ದರಿಂದ ಇದರಲ್ಲಿ ಏಕರೂಪದ ಕಾನೂನು ಇರಬೇಕು, ಮಾರಟ ತೆರಿಗೆ ಪದ್ಧತಿ ಬಹಳ ಹಳೆಯ ಪದ್ಧತಿಯಾಗಿದೆ, ಹೊಸ ಪದ್ಧತಿಗೆ ಹೋಗಬೇಕು, ಜಗತ್ತಿನ ಎಲ್ಲಾ ರಾಷ್ಟಗಳು ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಂಡಿವೆ, ಅದಕ್ಕೋಸ್ಕರ ನಾವೂ ಕೂಡ ಆ ಪದ್ಧತಿಯ ಕಡೆಗೆ ಹೋಗಬೇಕು ಎಂಬುದು ಒಂದು, ಎರಡನೆಯದಾಗಿ, ಇದು ಸರಳವಾಗಿದೆ ಎಂಬುದು, ಮೂರನೆಯದು, ತೆರಿಗೆಯ ಮೇಲೆ ತೆರಿಗೆ ಇಲ್ಲದೇ ಇರತಕ್ಕದ್ದು, ಇನ್ನೊಂದು ಅಕೌಂಟ್ಸ್‌ನ್ನು ಇಡಲೇಬೇಕಾಗುತ್ತದೆ, ಅಕೌಂಟ್ಸ್‌ನ್ನು ಮೇನ್‌ಟೇನ್ ಮಾಡಲೇಬೇಕಾಗುತ್ತದೆ, ಎಲ್ಲಕ್ಕಿಂತ ಹೆಚ್ಚಾಗಿ ತೆರಿಗೆ ಸೋರುವಿಕೆಯೇನಿದೆ ಅದು ಬಹಳಷ್ಟು ಕಡಿಮೆಯಾಗುತ್ತದೆ. ಅದಕ್ಕೋಸ್ಕರವಾಗಿ ಈ ಪದ್ಧತಿ ಮಾರಾಟ ತೆರಿಗೆ ಪದ್ಧತಿಗಿಂತ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಮತ್ತು ಹೆಚ್ಚು ಈಗಿನ ಹೊಸ ವ್ಯವಸ್ಥೆಗೆ ಅನುಗುಣವಾಗಿರುತ್ತದೆ ಎನ್ನುವ ಕಾರಣಕ್ಕೋಸ್ಕರ, ಏಕೆಂದರೆ ಇವತ್ತು ಇಡೀ ಜಗತ್ತಿನಲ್ಲಿ ಎಕಾನಮಿಯನ್ನೆಲ್ಲಾ ಓಪನ್ ಮಾಡಿಬಿಟ್ಟಿದ್ದಾರೆ. ಪ್ರೈವೇಟ್ ಇನ್‌ವೆಸ್ಟ್‌ಮೆಂಟ್, ಗ್ಲೋಬಲೈಜೇಷನ್, ಲಿಬರಲೈಜೇಷನ್, ಪ್ರೈವೇಟೈಜೇಷನ್ ಇವೆಲ್ಲ ಆದಮೇಲೆ ನಾವು ಯಾವುದೋ ಒಂದು ಹಳೆಯ ಪದ್ಧತಿ ಇಟ್ಟುಕೊಂಡಿರುವುದು ಸರಿಯಿಲ್ಲವೆಂದು ಚರ್ಚೆಯಾಗಿ ಕೊನೆಗೆ ಈ ಪದ್ಧತಿಗೆ ಹೋಗಬೇಕೆಂದು ಬಹುತೇಕವಾಗಿ ಒಪ್ಪಂದವಾಗಿದೆ. As a matter of fact, 2003ನೇ ಇಸ್ವಿಯಲ್ಲಿ ಕರ್ನಾಟಕದಲ್ಲಿ ಶ್ರೀಮಾನ್ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ, ಹಣಕಾಸಿನ ಮಂತ್ರಿಯಾಗಿದ್ದಾಗ ವ್ಯಾಟ್ ಅನ್ನು ಇಂಟ್ರ್‌ಡ್ಯೂಸ್ ಮಾಡಿ ಬೇರೆ ರಾಜ್ಯಗಳು ಒಪ್ಪಲಿಲ್ಲ ಎನ್ನುವ ಕಾರಣಕ್ಕೆ ಮತ್ತೇ ಹಿಂದಿನ ಮಾರಾಟ ಪದ್ಧತಿಗೆ ಬಂದಿದ್ದರು. ಬಜೆಟ್ ಮಂಡಿಸಿದಾಗ ನಾವು ವ್ಯಾಟ್‌ಗೆ ಹೋಗುತ್ತೇವೆಂದು ಅನೌನ್ಸ್ ಮಾಡಿ ಅದಕ್ಕೆ ಬೇಕಾದ ತೆರಿಗೆ ರೇಟ್‌ಗಳನ್ನು ಹಾಕಿ ನಂತರ ಪುನಃ ಹಿಂದಕ್ಕೆ ಹೋದರು. ಬೇರೆ ರಾಜ್ಯಗಳವರು ಒಪ್ಪಲಿಲ್ಲ, ಇಂಪ್ಲಿಮೆಂಟ್ ಆಗಲಿಲ್ಲ ಎಂದು ಹಿಂದಕ್ಕೆ ಹೋದರು.

ಈಗ ಒಂದು ಅಂತಿಮ ಸ್ವರೂಪಕ್ಕೆ ಬಂದಿದೆ. ನಾವೆಲ್ಲ ಏಕೆ ವ್ಯಾಟ್ ಅನ್ನು ಬೇಡ ಎಂದು ವಿರೋಧಿಸುತ್ತಿದ್ದೆವು ಎಂದರೆ, ಬಹಳ ಮುಖ್ಯವಾಗಿ ನಮಗೆ ತೆರಿಗೆ ನಷ್ಟವಾಗುತ್ತದೆ ಎನ್ನುವ ಕಾರಣಕೋಸ್ಕರ. ಮಾರಾಟ ತೆರಿಗೆಯಿಂದ ಟ್ರಾನ್ಸಿಷನ್ ಪಿರೀಯಡ್‌ನಲ್ಲಿ ತೆರಿಗೆ ಬಹಳ ನಷ್ಟವಾಗುತ್ತಿದೆ. ನಮಗೆ ರಾಜ್ಯಕ್ಕೆ ಬರುವ ಆದಾಯ ಸೋರಿಹೋಗುತ್ತದೆ, ಇದರಿಂದ ನಷ್ಟವಾಗುತ್ತದೆ. ಅದಕೋಸ್ಕರವಾಗಿ ಅದನ್ನು ನಾವು ವಿರೋಧ ಮಾಡತಕ್ಕಂಥ ಕೆಲಸ ಮಾಡಿದೆವು, ಅಷ್ಟೊಂದು ನಷ್ಟವನ್ನು ಭರಿಸಲಿಕ್ಕೆ ರಾಜ್ಯ ಸರ್ಕಾರಗಳಿಗೆ ಕಷ್ಟವಾಗುತ್ತದೆ. ಏಕೆಂದರೆ, ನಾವು ಇವತ್ತು ಲೆಕ್ಕ ಹಾಕಿದಾಗ 1800 ಕೋಟಿ ರೂಪಾಯಿ ಒಂದು ವರ್ಷಕ್ಕೆ ನಷ್ಟವಾಗುತ್ತದೆಂದು ಲೆಕ್ಕ ಹಾಕಿದ್ದೇವೆ. This is the loss we are going to incur. ಇಷ್ಟೊಂದು ಒಂದು ವರ್ಷದಲ್ಲಿ ನಷ್ಟ ಮಾಡಿಕೊಳ್ಳಲಿಕ್ಕೆ ಯಾವ ರಾಜ್ಯ ಸರ್ಕಾರಗಳೂ ತಯಾರಾಗುವುದಿಲ್ಲ, ನಾವು ತಯಾರಿಲ್ಲ ಬೇರೆ ಯಾರೂ ತಯಾರಾಗುವುದಿಲ್ಲ. ಬೇರೆ ರಾಜ್ಯಗಳಿಗೂ ಕೂಡ ಅದೇ ಭಯ ಇರುತ್ತದೆ. ನಂತರ ಇದು ಎಲ್ಲಾ ಚರ್ಚೆಯಾಗಿ, ಕೇಂದ್ರ ಸರ್ಕಾರದ ಜೊತೆಯಲ್ಲಿ ಹಾಗೂ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಶ್ರೀಚಿದಂಬರ ಅವರ ಜೊತೆ ಚರ್ಚೆ ಮಾಡಿ ಅವರು ಸಭೆ ಕರೆಸಿ ಅವರ ಜೊತೆಯಲ್ಲಿ ಚರ್ಚೆ ಮಾಡಿದ ನಂತರ, ಕೇಂದ್ರ ಸರ್ಕಾರ ಈಗ ಒಂದು ಒಪ್ಪಂದಕ್ಕೆ ಬಂದಿದೆ. ಆ ಒಪ್ಪಂದ ಏನು ಎಂದರೆ, ರಾಜ್ಯಗಳಿಗೆ ಎಷ್ಟು ನಷ್ಟವಾಗುತ್ತದೆ? ಮೊದಲನೇ ವರ್ಷ 100ಕ್ಕೆ 100ರಷ್ಟು ನಷ್ಟವನ್ನು ನಾವು ಭರಿಸಿಕೊಡುತ್ತೇವೆಂದು ಕೇಂದ್ರ ಸರ್ಕಾರ ಒಪ್ಪಿದೆ. ಕೇಂದ್ರಸರ್ಕಾರದ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಚಿದಂಬರಂ ಅವರೇ ಸ್ವತಃ ಎಂಪವರ್ ಕಮಿಟಿಯಲ್ಲಿ ಬಂದು, ನಾವು ಒಪ್ಪುತ್ತೇವೆ, ಮೊದಲನೇ ವರ್ಷ ಎಷ್ಟು ನಷ್ಟವಾಗುತ್ತದೆ ಅದನ್ನು 100 ಪರ್ಸೆಂಟ್ ಭರಿಸಿ ಕೊಡುತ್ತೇವೆ, 2ನೇ ವರ್ಷ 75 ಪರ್ಸೆಂಟ್‌ನಷ್ಟು ನಷ್ಟವನ್ನು ಭರಿಸಿಕೊಡುತ್ತೇವೆ. 3ನೇ ವರ್ಷ ಶೇಕಡ 50ರಷ್ಟು ನಷ್ಟವನ್ನು ಭರಿಸಿಕೊಡುತ್ತೇವೆ, ಮತ್ತೇ ಈ ಎಂಪರ್ ಕಮಿಟಿ ಆಗಿಂದಾಗ್ಗೆ ರಿವ್ಯೂ ಮಾಡುತ್ತಿರುತ್ತದೆ. ಏನೇನು ಆಗುತ್ತಿದೆ ಎಂದು ಇದರ ಬಗ್ಗೆ ರಿವ್ಯೂ ಮಾಡಿ, ಮಾಡಿ, ಇಂಪ್ಲಿಮೆಂಟೇಷನ್ ಸರಿಯಾದ ದಾರಿಯಲ್ಲಿ ಹೋಗುತ್ತದೆಯೇ ಇಲ್ಲವೇ. ನಷ್ಟ ಎಷ್ಟು ಆಗುತ್ತದೆ ಅಥವಾ ಇಲ್ಲವೆ, ಇದರಿಂದ ಸೋರಿಕೆ ಕಡಿಮೆಯಾತ್ತದೋ ಇಲ್ಲವೋ ರಾಜ್ಯ ಸರ್ಕಾರಕ್ಕೆ ಪ್ರತಿಕೂಲ ಪರಿಣಾಮಗಳು ಆಗುತ್ತವೆಯೋ ಇಲ್ಲವೋ ಅನುಕೂಲಗಳು ಏನು ಆಗುತ್ತವೆ. ಇವೆಲ್ಲವನ್ನೂ ಕೂಡ ನೋಡಲಿಕ್ಕೆ ಆಗಿಂದಾಗ್ಗೆ ಎಂಪವರ್ ಕಮಿಟಿ ಆಗಿಂದಾಗ್ಗೆ ರಿವ್ಯೂ ಮಾಡುವ ಕೆಲಸವನ್ನು ಕೂಡ ಮಾಡುತ್ತದೆ. ನನಗೆ ಮೈಸೂರಿನಲ್ಲಿ ಕೆಲವು ಪತ್ರಿಕೆಗಳು, ಇದರಿಂದ ರೈತರಿಗೆ ಬಡವರಿಗೆ ತೊಂದರೆಯಾದರೆ ಏನು ಮಾಡುತ್ತೀರಿ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ, ಇದೇನು ಬಹಳ ಬೈಂಡಿಂಗ್ ಏನೂ ಅಲ್ಲವಲ್ಲಾ, ಕಾನ್ಸ್‌ಸ್ಟಿಟ್ಯೂಷನಲಿ, ಇದನ್ನು ನಾವು ಒಂದು ಸಲ ಒಪ್ಪಿಕೊಂಡ ಮೇಲೆ ಅಲ್ಲಿ ಇರಬೇಕು ಎಂದು ಇಲ್ಲ, ಆ ತರಹದ ಬೈಂಡಿಂಗ್ ಏನೂ ಇಲ್ಲ, ನಮಗೆ ನಷ್ಟವಾಗುತ್ತದೆ ಎಂದರೆ ಯಾವುತ್ತಾದರೂ ಕೂಡ ನಾವು ಆದರಿಂದ ಹೊರಗಡೆ ಬರುವುದಕ್ಕೆ ನಮಗೆ ಅವಕಾಶವಿರುತ್ತದೆ. ಏಕೆಂದರೆ, ಇದು ಸ್ಟೇಟ್ ಸಬ್ಜೆಕ್ಟ್. ನಮಗೆ ಯಾವುದೇ ರೀತಿಯ ನಿರ್ಬಂಧ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ, ಅಥವಾ ಯಾವುದೇ ರಾಜ್ಯಗಳಿಗೆ ನಿರ್ಬಂಧ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಅಥವಾ ಯಾವುದೇ ರಾಜ್ಯಗಳಿಗೆ ನಿರ್ಬಂಧ ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ನಮಗೆ ಎಲ್ಲಾ ಅನುಕೂಲವಾಗುತ್ತದೆ ಎನ್ನುವುದು ನಮ್ಮ ಈಗಿನ ಅಭಿಪ್ರಾಯ, ಚರ್ಚೆ ಮಾಡಿರತಕ್ಕಂಥದ್ದು, ಅನುಭವ, ಬೇರೆ ಬೇರೆ ದೇಶಗಳಲ್ಲಿ ನಡೆಯತಕ್ಕಂಥ ಪದ್ಧತಿ, ಇವುಗಳನ್ನು

ಹೋಲಿಕೆ ಮಾಡಿ ನೋಡಿದಾಗ ಇದು ಅನುಕೂಲವಾಗುತ್ತದೆ ಎನ್ನುವ ಅಂಶ ಇದೆ. ಕೇಂದ್ರ ಸರ್ಕಾರದವರು ಕೂಡ ಇದರಿಂದ ಯಾವುದೇ ನಷ್ಟವಾಗುವುದಿಲ್ಲವೆಂದು ಹೇಳುತ್ತಾರೆ. ಆದರೆ ನಮಗೆ ಅಪ್ರಹೆನ್‌ಷನ್ ನಷ್ಟವಾಗುತ್ತದೆ ಎನ್ನತಕ್ಕಂಥದ್ದು ಇದೆ, ಇದರಿಂದ ಹೆಚ್ಚು ಅನುಕೂಲವಾಗುತ್ತದೆ ಎನ್ನುವುದು ಕೇಂದ್ರ ಸರ್ಕಾರದ ವಾದ. ಆದುದರಿಂದ ಅದು ಒಳ್ಳೆಯದಾದರೆ ನಮಗೆ ಒಳ್ಳೆಯದು. we welcome it ಆದರೆ ನಷ್ಟವಾದರೆ ನೀವು ಕೊಡಲೇಬೇಕೆಂದು ನಾವು ವಾದ ಮಂಡಿಸಿದ್ದಕ್ಕೆ ಅವರು ಒಪ್ಪಿದ್ದಾರೆ. ಆಮೇಲೆ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಕೂಡ ಅದನ್ನು phased mannerನಲ್ಲಿ ಈ ವರ್ಷ 2005–06ನೇ ಇಸ್ವಿಯಲ್ಲಿ 4 ಪರ್ಸೆಂಟ್ ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಇದೆ, ಅದನ್ನು ಹಾಗೆಯೇ ಇಟ್ಟಿದ್ದೇವೆ, ಮುಂದಿನ ವರ್ಷ 2 ಪರ್ಸೆಂಟ್‌ಗೆ ಕೊಡುವುದು, ಆಮೇಲೆ 2 ಪರ್ಸೆಂಟ್‌ನಿಂದ zeroಗೆ ಬರುವುದು, ಈ ತರಹ ಅದು ಕೂಡ ಒಪ್ಪಿಗೆಯಾಗಿದೆ. ನಾವು ಇನ್ನೊಂದು ಏನು ವಾದ ಮಾಡಿದ್ದೇವೆ ಎಂದರೆ, ಮಾನ್ಯ ಚಿದಂಬರಂ ಅವರಿಗೆ ಕೇಂದ್ರ ಸರ್ಕಾರಕ್ಕೆ ಏನು ಮಾಡಲಿಕ್ಕೆ ರಾಜ್ಯ ಸರ್ಕಾರಗಳಿಗೆ ಅಧಿಕಾರವಿಲ್ಲ. ಅದಕ್ಕೆ ನಮಗೆ ಅಧಿಕಾರ ಕೊಡಬೇಕು, ಈ ಅಧಿಕಾರ ಕೊಡಬೇಕು ಎನ್ನುವುದಾದರೆ, ರಾಜ್ಯಾಂಗ ತಿದ್ದುಪಡಿಯಾಗಬೇಕು, ರಾಜ್ಯಾಂಗ ತಿದ್ದುಪಡಿ ಮಾಡಿ ನಮಗೆ ಅಧಿಕಾರ ಕೊಡಿ, ಇಲ್ಲ ಅಂದರೆ ನಮಗೆ ರೀಸೋರ್ಸ್‌ಸ್ ರಾಜ್ಯ ಸರ್ಕಾರಗಳಿಗೆ ಇರುವುದು ಮಾರಾಟ ತೆರಿಗೆ ಮಾತ್ರ. ಮಾರಾಟ ತೆರಿಗೆ ಬಿಟ್ಟರೆ ಬೇರೆ ಯಾವುದೂ ಕೂಡ ರಿಸೋರ್ಸ್‌ಸ್ ಇಲ್ಲ. ಬೇರೆ ಬೇರೆ ಸಣ್ಣ ಸಣ್ಣ ತೆರಿಗೆಗಳು ಇವೆ. ಅದು ಬಿಟ್ಟರೆ ಕೇಂದ್ರ ಸರ್ಕಾರಕ್ಕಿರುವಷ್ಟು ಸೋರ್ಸ್‌ಸ್, ಅದಕ್ಕೆ ಹೋಲಿಕೆ ಮಾಡಿದರೆ ರಾಜ್ಯ ಸರ್ಕಾರಗಳಿಗೆ ಏನೇನೂ ಅಲ್ಲ. ಅದುದರಿಂದ ನೀವೇ ಸೇವಾ ಶುಲ್ಕ ವಸೂಲು ಮಾಡುತ್ತಿದ್ದೀರಿ, ನಮಗೂ ಕೂಡ ಅಧಿಕಾರ ಇರಬೇಕು, ಅದಕ್ಕೆ ರಾಜ್ಯಾಂಗ ತಿದ್ದುಪಡಿ ಮಾಡಿ, ರಾಜ್ಯ ಸರ್ಕಾರಗಳಿಗೆ ಅಧಿಕಾರ ಕೊಡಬೇಕೆಂದು ನಾವು ವಾದ ಮಾಡಿದೆವು ಅದಕ್ಕೆ ಅವರು ರಾಜ್ಯಾಂಗವನ್ನು ತಿದ್ದುಪಡಿ ಮಾಡಿ, ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ. ಇವೆಲ್ಲ ಚರ್ಚೆಯಾದ ಮೇಲೆ ಅಂತಿಮವಾಗಿ ವೈಟ್ ಪೇಪರ್ ಈಗಾಗಲೇ ನಾವು ಎಂಪವರ್ ಕಮಿಟಿಯಿಂದ ನಾವು ಬಿಡುಗಡೆ ಮಾಡಿದ್ದೇವೆ. ಆದಾದ ಮೇಲೆ ಕೆಲವು ತಿದ್ದುಪಡಿಗಳನ್ನು ಎಂಪವರ್ಡ್ ಕಮಿಟಿಯಲ್ಲಿ ಇದನ್ನು ಪ್ರೆಸಿಡೆಂಟ್ ಅಸೆಂಟ್ ಆದಮೇಲೆ ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ರೇಟ್‌ಗಳು ಹೇಗೆ ಇರಬೇಕೆಂದು ತೀರ್ಮಾನವಾಗಿದೆ, ಸುಮಾರು 550 ವಸ್ತುಗಳು, ಈ ವ್ಯಾಟ್‌ನಡಿಯಲ್ಲಿ ಬರುತ್ತವೆ. ಇದರಲ್ಲಿ zero ಟ್ಯಾಕ್ಸ್ ಬರತಕ್ಕಂಥವುಗಳು ಸುಮಾರು 46ಐಟಂಗಳು ಬರುತ್ತವೆ. 4 ಪರ್ಸೆಂಟ್‌ನಲ್ಲಿ ಬರತಕ್ಕಂಥವು, ಎರಡು ರೇಟ್‌ಗಳು ಇವೆ, ಒಂದು 4 ಪರ್ಸೆಂಟ್ ಇವು ಬೇಸಿಕ್ ರೇಟ್‌ಗಳು 4 ಪರ್ಸೆಂಟ್ ಒಂದು ಇನ್ನೊಂದು ಸ್ಟಾಂಡರ್ಡ್ ರೇಟ್ 12 1/2 ಪರ್ಸೆಂಟ್. ನಮ್ಮಲ್ಲಿ ಹಿಂದೆ ಅನೇಕ ರಾಜ್ಯಗಳಲ್ಲಿ 15, 18, 20, 21 ಹೀಗೆ ಬೇರೆ ಬೇರೆ ರೀತಿಯಲ್ಲಿ ಕಮಾಡಿಟಿ ಮೇಲೆ ರೇಟ್ಸ್ ಇತ್ತು. ಇಡೀ ದೇಶಕ್ಕೆ ಎಲ್ಲಾ ರಾಜ್ಯಗಳಿಗೂ ಅನ್ವಯವಾಗುವ ಒಂದು ಲಿಸ್ಟ್ ಮಾಡಿದ್ದಾರೆ. ಯಾವುವು zeroಗೆ ರೇಟ್, ಯಾವುವು 4 ಪರ್ಸೆಂಟ್, ಯಾವುವು 12 1/2 ಪರ್ಸೆಂಟ್, ಹೀಗೆ ಮಾಡಿದ್ದಾರೆ. ಆ ಪಟ್ಟಿ ಕೆಲವು ಎಲ್ಲಾ zeroಗೆ ಸೇರಿದವು ಬಿಟ್ಟುಹೋಗಿರುವುದನ್ನು ಅವನ್ನೆಲ್ಲ ಸೇರಿಸಿದ್ದೇವೆ. ಅದಕ್ಕೊಂದು ತಿದ್ದುಪಡಿ ತಂದಿದ್ದೇವೆ. ಎರಡನೇಯದಾಗಿ 270 ಐಟಂಗಳು ನಾಲ್ಕು ಪರ್ಸೆಂಟ್‌ಗೆ ಸೇರಿವೆ. ಚಿನ್ನ ಮತ್ತು ಜ್ಯುಯಲರೀಸ್ ಇವು ಮಾತ್ರ 1 ಪರ್ಸೆಂಟ್, ಇಡೀ ದೇಶದಲ್ಲಿ ಹಾಗೆ ಒಪ್ಪಿದ್ದಾರೆ. ಆದರೆ ಪೆಟ್ರೋಲ್, ಡೀಸಲ್, ಮತ್ತೆ ಷುಗರ್ ಕೇನ್ ಇವು ಯಾವು

ವ್ಯಾಟ್‌ನಡಿಯಲ್ಲಿ ಬರುವುದಿಲ್ಲ. ಇವುಗಳಿಗೆ ಸಂಬಂಧಪಟ್ಟಂತೆ ಆಯಾಯಾ ರಾಜ್ಯಗಳಿಗೆ ಬಿಟ್ಟಿದ್ದಾರೆ. ಅವರು ಎಷ್ಟು ತೆರಿಗೆ ಹಾಕಬೇಕು ಎನ್ನುವುದನ್ನು ಅವರಿಗೆ ಬಿಟ್ಟಿದ್ದಾರೆ. ಆಯಾಯಾ ರಾಜ್ಯಗಳವರು ಪೆಟ್ರೋಲ್‌ಗೆ, ಡೀಸಲ್‌ಗೆ ಎಷ್ಟೆಷ್ಟು ತೆರಿಗೆ ಹಾಕಬೇಕು ಎನ್ನುವ ವಿಚಾರದಲ್ಲಿ ಅವರಿಗೆ ಬಿಟ್ಟಿದ್ದಾರೆ. ಈ 550 ಐಟಂಗಳು ಏನಿವೆ, ಎಲ್ಲಾ ರಾಜ್ಯಗಳೂ ಕೂಡ ಈ ವಸ್ತುಗಳಿಗೆ ಒಪ್ಪಿಕೊಂಡಿರುವ ದರವೇ ಆಗಿವೆ. ಯಾವ ರಾಜ್ಯಗಳು ಇದಕ್ಕಿಂತ ಬೇರೆ ದರವನ್ನು ನಿಗದಿ ಮಾಡುವುದಿಲ್ಲ, ಈ ರೀತಿಯ ಒಂದು ಒಪ್ಪಂದ ಆಗಿದೆ, ಇದು ಒಪ್ಪಂದ. ಅದಕೋಸ್ಕರವೇ ಪ್ರತಿ ರಾಜ್ಯಗಳೂ ಕೂಡ ಒಂದು ವ್ಯಾಟ್ ಕಾನೂನನ್ನು ಮಾಡಿರುವುದು. ಈ ವ್ಯಾಟ್ ಕಾನೂನು ರಾಷ್ಟ್ರಪತಿಗಳ ಅಂಕಿತ ಆದ ಮೇಲೆ ಈ ತಿದ್ದುಪಡಿಗಳು ಬಂದಿರುವುದು, ಅದಕೋಸ್ಕರವಾಗಿಯೇ ನಾವು ಇದನ್ನು ತಂದಿರುವುದು, ಏನು ಇದರಲ್ಲಿ ಬಾರಿ ಬಹಳ ದೊಡ್ಡ ವ್ಯತ್ಯಾಸಗಳು ಏನು ಅಗಿಲ್ಲ. ನಾವು ಹೊಸ ಪದ್ಧತಿಗೆ ಹೋಗುತ್ತಿದ್ದೇವೆ, ಅದಕೋಸ್ಕರ ಇದು ಅತ್ಯಂತ ಅಗತ್ಯ. ಅದುದರಿಂದ ಇದು ಬಹಳ ಜರೂರು ಅಗಿರುವುದರಿಂದ ಈ ಸದನದಲ್ಲಿ ಆಗಬೇಕೆಂದು ನಾನು ಇದನ್ನು ಮಂಡಿಸಿರುವುದು, ದಯವಿಟ್ಟು ತಾವು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ಈ ಕರ್ನಾಟಕ ಮೌಲ್ಯವರ್ಧಿತ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಮಾನ್ಯ ಹಣಕಾಸಿನ ಸಚಿವರು ತಂದಿದ್ದಾರೆ. ಸರ್ಕಾರ ತಂದಿರುವ ಈ ಬಿಲ್ ಅನ್ನು ನಾವು ಒಪ್ಪಬೇಕೇ ಎನ್ನುವ ಒಂದು ತರಹ ಅನಿವಾರ್ಯತೆ ಇದೆ. ಮಾನ್ಯ ಉಪ ಮುಖ್ಯಮಂತ್ರಿಗಳೂ ಮತ್ತು ಹಣಕಾಸಿನ ಸಚಿವರು ಆಗಿರತಕ್ಕಂಥ ಶ್ರೀ ಸಿದ್ದರಾಮಯ್ಯನವರು, ಹಿಂದೆ ಹಣಕಾಸಿನ ಸಚಿವರು ಆಗಿದ್ದಾಗಲೂ ಈ ವಿಷಯದ ಬಗ್ಗೆ ಸಾಕಷ್ಟು ಮಾಹಿತಿಯನ್ನು, ಅನುಭವವನ್ನು ಪಡೆದಿದ್ದಾರೆ. ಈ ಕಾರಣಗಳಿಗಾಗಿ ಅವರು ವಿದೇಶಿ ಪ್ರವಾಸಗಳಿಗೂ ಹೋಗಿ ಸಾಕಷ್ಟು ಅಧ್ಯಯನ ಮಾಡಿ, ಸರ್ಕಾರ ಇದನ್ನು ಅಳವಡಿಸಿಕೊಳ್ಳಬೇಕೋ ಬೇಡವೋ ಎನ್ನುವುದರ ಬಗ್ಗೆ ಸಾಕಷ್ಟು ವಿಸ್ತಾರವಾದಂಥ ಒಂದು ಅಧ್ಯಯನವನ್ನು ಪಡೆದಿದ್ದಾರೆ. ಮತ್ತೆ ಇದಾದನಂತರ ಹಿಂದಿನ ಸರ್ಕಾರದ ಅವಧಿಯಲ್ಲಿ ಇದೇ ಸದನದಲ್ಲಿ ಈ ವ್ಯಾಟ್ ತರತಕ್ಕಂಥದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅಂದರೆ, ಈ ಬಿಲ್ ಇಂಟ್ರಡ್ಯೂಸ್ ಆಗಿ ಇದರ ಬಗ್ಗೆ ಚರ್ಚೆಯಾಗಿ ಆ ಸಂದರ್ಭದಲ್ಲಿ ಇದು ಪಾಸ್ ಕೂಡ ಆಗಿತ್ತು. ಮತ್ತೆ ಆ ಸಂದರ್ಭದಲ್ಲಿ ನಾವೂ ಕೂಡ ಭಾಗವಹಿಸಿದ್ದೇವೆ. ಆದರೆ, ಈಗ ಇಡೀ ದೇಶದ ಮಟ್ಟದಲ್ಲಿ ಇದರ ಬಗ್ಗೆ ಎಂಪವರ್ ಕಮಿಟಿ ಕೊಟ್ಟಿರತಕ್ಕಂಥ ರಿಪೋರ್ಟ್‌ನ ಆಧಾರದಮೇಲೆ ಈ ಒಂದು ತಿದ್ದುಪಡಿಯನ್ನು ತಂದು ಇದನ್ನು ಸ್ವೀಕರಿಸುವುದಕ್ಕೆ ನಾವು ಹೊರಟಿದ್ದೇವೆ. ಇದು ಎಂಪವರ್ ಕಮಿಟಿಗೆ ಹೋದ ನಂತರ ಕೆಲವು ಒಳ್ಳೆಯ ಸಂಗತಿಗಳು ಇದರ ಬಗ್ಗೆ ಬಂದಿವೆ. ಒಂದು ವೇಳೆ ಇದು ಎಂಪವರ್ ಕಮಿಟಿಗೆ ಹೋಗದೆ ಹಿಂದೆ ಇದ್ದಂಥದ್ದನ್ನೇ ನಾವು ಅಳವಡಿಸಿಕೊಂಡಿದ್ದರೆ ನಮ್ಮ ರಾಜ್ಯಕ್ಕೆ ಸ್ವಲ್ಪ ತೊಂದರೆ ಆಗುತ್ತಿತ್ತೆಂದು ಅನೇಕ ಸಂದರ್ಭದಲ್ಲಿ ನಮಗೆ ಅನ್ನಿಸುತ್ತದೆ. ಏಕೆಂದರೆ, ಇದಕ್ಕೆ ಸಂಬಂಧಪಟ್ಟಂತೆ ಒಂದು ಸಣ್ಣ ಉದಾಹರಣೆ ಕೊಡುವುದಾದರೆ, ಹಿಂದೆ ಆರ್‌ಎನ್‌ಆರ್ ರೇಟ್‌ನ್ನು ಸ್ಟೇಟ್‌ನವರು 25 ಪರ್ಸೆಂಟ್ ಮಾಡಬೇಕೆಂದು ರೆಕಮೆಂಡ್ ಮಾಡಿದ್ದರು. ಆದರೆ, ಇದು ಈಗ 12.5 ಪರ್ಸೆಂಟ್ ಆಗಿದೆ. ಈ ರೀತಿಯಾಗಿ ಕೆಲವು ಅನುಕೂಲಗಳು ಆಗಿವೆ. ಈ ರೀತಿಯಾದ ಅನೇಕ ಸಂಗತಿಗಳು ಇದರಲ್ಲಿವೆ. ಇದರಲ್ಲಿ ಮುಖ್ಯವಾಗಿ ಇರತಕ್ಕಂಥದ್ದು ಮತ್ತು ಬಹಳ ಮುಖ್ಯವಾಗಿ ಏಕರೂಪದ ತೆರಿಗೆ ಪದ್ಧತಿ

ಇರಬೇಕೆಂಬುದು ನಮ್ಮೆಲ್ಲರ ಅಭಿಪ್ರಾಯ ಕೂಡ ಆಗಿತ್ತು. ಗೋವ ಮತ್ತು ಮಹಾರಾಷ್ಟ್ರ ರಾಜ್ಯಗಳ ಹತ್ತಿರದ ಪ್ರದೇಶದಲ್ಲಿ ನಾನು ಇದ್ದೇನೆ. ಇವತ್ತಿಗೂ ಮತ್ತೆ ಈ ಕ್ಷಣದಲ್ಲಿ ಕೂಡ ಅಲ್ಲಿ ಮೋಟರ್ ಸೈಕಲ್ ಮತ್ತು ಕಾರ್ ತರಬೇಕಾದರೆ ಗೋವ ಮತ್ತು ಮಹಾರಾಷ್ಟ್ರಕ್ಕೆ ಹೋಗುತ್ತಾರೆ. ಏಕೆಂದರೆ, ಇವುಗಳಿಗೆ ಅಲ್ಲಿ ಟ್ಯಾಕ್ಸ್ ಕಡಿಮೆ ಇದೆ. ಅಲ್ಲಿ ರಿಜಿಸ್ಟ್ರೇಷನ್ ಮಾಡಿಕೊಂಡು ನಮ್ಮ ರಾಜ್ಯದಲ್ಲಿ ಈ ಗಾಡಿಗಳನ್ನು ಓಡಿಸುತ್ತಾರೆ. ಇದರಿಂದ ನಮ್ಮ ರಾಜ್ಯಕ್ಕೆ ತೆರಿಗೆ ಹಣ ಹಾನಿಯಾಗುತ್ತಿತ್ತು. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ, ಈ ತೆರಿಗೆ ಪದ್ಧತಿಯಲ್ಲಿ ಏಕರೂಪತೆವ ತರತಕ್ಕಂಥ ಅಗತ್ಯತೆ ಇದೆ. ತೆರಿಗೆಯ ಏಕರೂಪತೆ ಬರುವುದರಿಂದ ಅನುಕೂಲವಾಗುತ್ತದೆ. ಮತ್ತೆ ಇದರಿಂದ ಸಾಕಷ್ಟು ಅನಾನುಕೂಲ ಕೂಡ ಆಗುತ್ತದೆ. ನಾವು ಈಗಾಗಲೇ ಡಬ್ಲೂಟಿ ಒಗೆ ಅವತ್ತೇ ಸಹಿ ಹಾಕಿರುವುದರಿಂದ ಈ ರೀತಿಯ ವ್ಯವಸ್ಥೆ ಮತ್ತು ಪದ್ಧತಿಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕಾಗಿದೆ. ಮುಂದೆ ಎಲ್ಲೆಲ್ಲಿಗೆ ಹೋಗಿ ತಲುಪುತ್ತೇವೆಂಬುದೂ ಕೂಡ ಗೊತ್ತಿಲ್ಲ. ಏಕೆಂದರೆ ಮೊನ್ನೆ ದಿವಸ ಪಾರ್ಲಿಮೆಂಟ್‌ನಲ್ಲಿ ಪೇಟೆಂಟ್ ಆ್ಯಕ್ಟ್‌ನ್ನು ಪಾಸ್ ಮಾಡಿದರು. ಪೇಟೆಂಟ್ ಟ್ಯಾಕ್ಸ್ ಬಗ್ಗೆ, ಮಾನ್ಯ ಬಿ.ಎಂ.ಕುಮಾರ್‌ಸ್ವಾಮಿಯವರು ಬಿ.ಜೆ.ಪಿ.ಯ ಎಲ್ಲಾ ಶಾಸಕರುಗಳಿಗೆ ವಿಶೇಷವಾದಂಥ ಒಂದು ತರಬೇತಿಯನ್ನು ಕೊಟ್ಟರು. ನಮ್ಮ ಶಾಸಕಾಂಗ ಪಕ್ಷದ ವತಿಯಿಂದ ಈ ಒಂದು ಕಾರ್ಯಕ್ರಮವನ್ನು ನಾವು ಏರ್ಪಡಿಸಿದ್ದೆವು. ಇದರ ಬಗ್ಗೆ ಅವರು ನಮಗೆ ಸಾಕಷ್ಟು ವಿಚಾರಗಳನ್ನು ಹೇಳಿದರು. ಇದನ್ನು ನೋಡಿದರೆ ಇದು ಭಯಾನಕವಾಗಿದೆ ಎಂದು ಗೊತ್ತಾಗುತ್ತದೆ. ಮತ್ತೆ ಔಷಧಿಗಳು ಮತ್ತು ಇತ್ಯಾದಿಗಳ ದರ ಎಷ್ಟು ಪಟ್ಟು ಹೆಚ್ಚಾಗುತ್ತದೆ ಎನ್ನತಕ್ಕಂಥದ್ದನ್ನು ನೋಡಿದಾಗ ನಮಗೆ ನಿಜವಾಗಿಯೂ ಕೂಡ ಹೆದರಿಕೆಯಾಗುತ್ತದೆ. ಆದರೆ, ಡಬ್ಲ್ಯೂ.ಟಿ.ಓ.ಗೆ ಸಹಿ ಮಾಡಿರತಕ್ಕಂಥ ಹಿನ್ನೆಲೆಯಲ್ಲಿ ಈ ರೀತಿಯಾದ ಒಂದು ವ್ಯವಸ್ಥೆಗೆ ಒಪ್ಪಿಕೊಳ್ಳಬೇಕಾಗಿರತಕ್ಕಂಥ ಅನಿವಾರ್ಯತೆ ಇರತಕ್ಕಂಥ ಸಂದರ್ಭದಲ್ಲಿ ಅನೇಕ ಸಂಗತಿಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಮತ್ತು ಒಪ್ಪಿಕೊಳ್ಳುತ್ತಿದ್ದೇವೆ. ಆದರೆ, ಈ ಸಂದರ್ಭದಲ್ಲಿಯೂ ಕೂಡ ಒಂದು ಗೊಂದಲ ಇದೆ. ಇದನ್ನು ಮಾನ್ಯ ಹಣಕಾಸಿನ ಸಚಿವರು ಈ ಸದನದಲ್ಲಿ ಸ್ಪಷ್ಟಪಡಿಸಬೇಕು. ಈ ಗೊಂದಲ ಏನೆಂದರೆ, ಅನೇಕ ರಾಜ್ಯಗಳು ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದಾರೆಯೆ? ಏಕೆಂದರೆ, ಇದಕ್ಕೆ ತಮಿಳುನಾಡು ರಾಜ್ಯ ವಿರೋಧ ಮಾಡಿತ್ತು ಮತ್ತೆ ಇದಕ್ಕೆ ನಾವೇನು ಕಡಿಮೆ ಎಂದು ಕೇರಳ ರಾಜ್ಯದವರು ಹೇಳಿದ್ದರು ಮತ್ತು ಬೇರೆ ಬೇರೆ ರಾಜ್ಯಗಳ ಅಭಿಪ್ರಾಯ ಇವತ್ತಿನ ದಿವಸ ಬೇರೆ ಬೇರೆ ಇದೆ. ಇದು ಶಮಗೂ ಕೂಡ ಗೊತ್ತಿದೆ. ದೇಶ ಮಟ್ಟದಲ್ಲಿ ಎಂಪವರ್ ಕಮಿಟಿ ಇದರ ಬಗ್ಗೆ ಚರ್ಚೆ ಮಾಡಿ ಒಂದು ಹಂತದಲ್ಲಿ ಇದರ ಬಗ್ಗೆ ಒಪ್ಪಿಗೆ ಬಂದರೂ ಕೂಡ ಅನೇಕ ರಾಜ್ಯಗಳು ಇದನ್ನು ಅಳವಡಿಸುವುದಕ್ಕೆ ಅವರ ಪೂರ್ಣ ಒಪ್ಪಿಗೆ ಇಲ್ಲದೇ ಇರತಕ್ಕಂಥ ಸಂದರ್ಭದಲಿ ನಮ್ಮ ಹಣಕಾಸಿನ ಸಚಿವರು ಒಂದು ಹೆಜ್ಜೆ ಮುಂದಿದ್ದು, ಇದರಿಂದ ನಮ್ಮ ರಾಜ್ಯಕ್ಕೆ ಸುಮಾರು 2000 ಕೋಟಿ ರೂಪಾಯಿಗಳಷ್ಟು ಆದಾಯ ಕಡಿಮೆ ಬರಬಹುದೆಂಬ ಅಂದಾಜು ಇರತಕ್ಕಂಥದ್ದನ್ನು ಕೇಂದ್ರಸರ್ಕಾರ ಭರಿಸಿಕೊಡುತ್ತದೆ ಎಂಬ ಹಿನ್ನೆಲೆಯಲ್ಲಿ ಇದನ್ನು ಒಪ್ಪಿಕೊಂಡಿದ್ದೀರಿ. ಆದರೆ, ಉಳಿದ ರಾಜ್ಯಗಳು ಇದಕ್ಕೆ ಒಪ್ಪಿಗೆ ಕೊಡದೇ ಇದ್ದಂಥ ಸಂದರ್ಭದಲ್ಲಿ ಮುಂದೆ ಏನು ಪರಿಸ್ಥಿತಿ ಆಗುತ್ತದೆ ಎಂಬುದು ನಮ್ಮ ಕಣ್ಣುಮುಂದೆ ಇರತಕ್ಕಂಥ ಒಂದು ದೊಡ್ಡ ಪ್ರಶ್ನೆಯಾಗಿದೆ. ಇದನ್ನು ತಮಿಳುನಾಡು ಒಪ್ಪಿಕೊಂಡಿಲ್ಲ ಎಾದು ಇಟ್ಟುಕೊಳ್ಳಿ. ಇದು ಸ್ಟೇಟ್ ಸಬ್ಜೆಕ್ಟ್ ಆಗಿರುವುದರಿಂದ ಇದನ್ನು ಒಪ್ಪಿಕೊಳ್ಳತಕ್ಕಂಥ ತೀರ್ಮಾನ ಆಯಾಯ ರಾಜ್ಯಕ್ಕೆ ಬಿಟ್ಟ ವಿಷಯ. ಈಗಾಗಲೇ ಮಾನ್ಯ

ಹಣಕಾಸಿನ ಸಚಿವರು ಹೇಳಿದ ಪ್ರಕಾರ ಇದು ಸ್ಟೇಟ್ ವಿಷಯವಾಗಿರುವುದರಿಂದ, ಇದರಿಂದ ಯಾವಾಗ ಬೇಕಾದರೂ ಹೊರಗಡೆ ಹೋಗಬಹುದು. ಈ ಒಂದು ಹಿನ್ನಲೆಯಲ್ಲಿ ತಮಿಳುನಾಡು ಮತ್ತು ಇನ್ನ್ಯಾವುದೇ ರಾಜ್ಯ ಇದನ್ನು ಒಪ್ಪಿಕೊಳ್ಳುವುದಿಲ್ಲ. ಈ ರೀತಿಯಾದಾಗ ನಮ್ಮ ರಾಜ್ಯದ ನಿಲುವೇನು ಎನ್ನತಕ್ಕಂಥದ್ದು ನಮ್ಮ ಮುಂದೆ ಇರತಕ್ಕಂಥ ಒಂದು ಪ್ರಶ್ನೆ ಆಗಿದೆ. ಕೇಂದ್ರ ಮಟ್ಟದಲ್ಲಿ ಎಂಪವರ್ ಕಮಿಟಿ ಅಥವಾ ಕೇಂದ್ರ ಹಣಕಾಸಿನ ಸಚಿವರು ಆಗಲಿ, ಎಲ್ಲಾ ರಾಜ್ಯಗಳು ಇದನ್ನು ಒಪ್ಪಿಕೊಳ್ಳಲೇಬೇಕೆಂಬ ನಿಬಂಧನೆಗಳನ್ನು ಹಾಕಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥದ್ದನ್ನು ತಾವು ಈ ಸಂದರ್ಭದಲ್ಲಿ ನಮಗೆ ಸ್ಪಷ್ಟಪಡಿಸಕ್ಕಂಥ ಅಗತ್ಯತೆ ಕೂಡ ಇದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಆ ರಾಜ್ಯ ಈ ರಾಜ್ಯ ಒಪ್ಪಿಕೊಂಡಿಲ್ಲ ಎಂದು ಮತ್ತಷ್ಟು ಗೊಂದಲಗಳು ನಿರ್ಮಾಣವಾಗತಕ್ಕಂಥ ಎಲ್ಲಾ ಸಂದರ್ಭಗಳು ಸಾಧ್ಯತೆ ಇವೆ. ಈ ಒಂದು ಹಿನ್ನೆಲೆಯಲ್ಲಿ ನಾವು ಮಾಡಬೇಕಾಗುತ್ತದೆ. ಈಗ ಶ್ವೇತಪತ್ರವನ್ನು ಎಂಪವರ್ ಕಮಿಟಿ ಕೊಟ್ಟಿದೆ, ಅದನ್ನು ಇನ್ನಷ್ಟು ಪ್ರಚಾರ ಮಾಡತಕ್ಕಂಥ ಅಗತ್ಯತೆ ಇದೆ. ಈಗಾಗಲೇ ವ್ಯಾಟ್ ಬಗ್ಗೆ ಸಾಕಷ್ಟು ಗೊಂದಲಗಳು ನಿರ್ಮಾಣವಾಗಿವೆ. ಆದರೆ ಒಂದು ಹಂತದಲ್ಲಿ ಕಳೆದ ಎರಡು-ಮೂರು ವರ್ಷಗಳಿಂದ ಇದರ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಮತ್ತೆ ವಾಣಿಜ್ಯ ತೆರಿಗೆ ಇಲಾಖೆಯಲ್ಲಿಯೂ ಕೂಡ ಸಾಕಷ್ಟು ಪ್ರಯತ್ನ ಮಾಡಿದೆ. ಆದರೆ ಇಲಾಖೆಯಲ್ಲಿ ಕಂಪ್ಯೂಟರೈಜೇಷನ್ ಮತ್ತು ಕೆಲವು ಏಜೆನ್ಸಿಗೆ ತರಬೇತಿ ಕೂಡ ಕೊಟ್ಟಿದೆ. ಆದರೆ, ಇವೆಲ್ಲವೂ ಪೂರ್ಣವಾಗಿಲ್ಲ. ಇದರಲ್ಲಿ ಇನ್ನೂ ಅನೇಕ ಲೋಪ ದೋಷಗಳು ಇವೆ. ಇದನ್ನು ಏಪ್ರಿಲ್ ತಿಂಗಳೊಳಗಾಗಿ ಪೂರ್ಣಗೊಳಿಸಬಹುದು. ಆದರೆ, ಈ ವ್ಯವಸ್ಥೆ ಇನ್ನೂ ಸಿದ್ಧವಾಗಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದು ನಮ್ಮ ಮುಂದೆ ಇರತಕ್ಕಂಥ ಪ್ರಶ್ನೆಯಾಗಿದೆ. ಅಂದರೆ ಈ ವ್ಯಾಟ್‌ನ್ನು ಪೂರ್ಣವಾಗಿ ಜಾರಿಗೊಳಿಸುವುದಕ್ಕೆ ಬೇಕಾಗಿರತಕ್ಕಂಥ ವ್ಯವಸ್ಥೆಗಳಾದ ಕಂಪ್ಯೂಟರೈಜೇಷನ್ ಅಥವಾ ಇದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಸಲಕರಣೆಗಳು ಮತ್ತು ಮಾಹಿತಿಗಳು ಪೂರ್ಣ ಆಗಿವೆಯೇ ಎಂಬುದು ಗೊತ್ತಾಗಬೇಕು. ಏಕೆಂದರೆ, ಇದು ವ್ಯಾಪಾರಸ್ಥರಿಗೆ ತಲುಪಬೇಕಾಗುತ್ತದೆ. ಈಗ ಛೇಂಬರ್ ಆಫ್ ಕಾಮರ್ಸ್ ಮತ್ತು ಇತ್ಯಾದಿಗಳೆಲ್ಲವೂ ಇವೆ. ಎರಡು ವರ್ಷಗಳ ಹಿಂದೆ ಇದರ ಬಗ್ಗೆ ಇಲಾಖೆ ಸಾಕಷ್ಟು ಪರಿಶ್ರಮಪಟ್ಟಿತ್ತು. ಈ ಸಂದರ್ಭದಲ್ಲಿ ಮಾನ್ಯ ಸಿದ್ಧರಾಮಯ್ಯನವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಛೇಂಬರ್ ಆಫ್ ಕಾಮರ್ಸ್ ಮತ್ತು ಮರ್ಚೆಂಟ್ಸ್ ಅಸೋಸಿಯೇಷನ್ ಬೇರೆ ಬೇರೆ ಅಸೋಸಿಯೇಷನ್‌ಗಳ ಜೊತೆ ಇಲಾಖೆ ವತಿಯಿಂದ ಇನ್‌ಟ್ರಾಕ್ಷನ್ ಮಾಡತಕ್ಕಂಥದರಲ್ಲಿ ಎಲ್ಲೋ ಒಂದು ಕಡೆ ಕೊರತೆ ಆಗಿದೆ ಎಂದು ನಮಗೆ ಅನ್ನಿಸುತ್ತದೆ. ಹಿಂದೆ ಆಗಿದ್ದಂಥದ್ದು ಮತ್ತೆ ನೆನೆಗುದಿಗೆ ಬಿತ್ತು. ಮತ್ತೆ ಜನರು ಇದನ್ನು ಮರೆತುಬಿಟ್ಟರು. ಹಾಗೆಯೇ ಇಲಾಖೆ ಕೂಡ ಇದನ್ನು ಮರೆತು ಬಿಟ್ಟಿತ್ತು. ಆದರೆ ನೀವು ಬಂದ ಮೇಲೆ ಚಾಲನೆ ಕೊಟ್ಟು ಈಗ ಪ್ರಾರಂಭ ಮಾಡಿದ್ದೀರಿ. ಇದರ ಬಗ್ಗೆ ಹೆಚ್ಚೆಚ್ಚು ಇನ್‌ಟ್ರ್ಯಾಕ್ಷನ್ ಮಾಡಿ ವ್ಯಾಪಾರಸ್ಥರು ಮತ್ತು ಟ್ಯಾಕ್ಸ್ ಪ್ರಾಕ್ಟೀಷನರ್ಸ್‌ಗೆ ಇರಬಹುದು ಜನರಿಗೆ ಅಥವಾ ಸಾಮಾನ್ಯ ಜನರಿಗೆ ಇದರಿಂದ ಏನು ಪರಿಣಾಮ ಆಗುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾದಂಥ ಮಾಹಿತಿಗಳನ್ನು ಕೊಟ್ಟು ಇದನ್ನು ಅಳವಡಿಸಿಕೊಳ್ಳಬೇಕಾಗಿರತಕ್ಕಂಥ ರೀತಿ ನೀತಿಗಳನ್ನು ಸರಿಯಾಗಿ ಮತ್ತು ಸಮರ್ಪಕವಾಗಿ ತಿಳಿಸಬೇಕಾಗಿರತಕ್ಕಂಥ ಅಗತ್ಯತೆ ಇದೆ. ಈ ಸಂದರ್ಭದಲ್ಲಿ ಮಾನ್ಯ ಹಣಕಾಸಿನ ಸಚಿವರಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆದಿವಸ ತಾವು ಮೈಸೂರಿನಲ್ಲಿ ನೀಡಿರತಕ್ಕಂಥ ಹೇಳಿಕೆಗಳಿಂದ ಇನ್ನೂ ಹೆಚ್ಚು ಗೊಂದಲಗಳನ್ನು ನಿರ್ಮಾಣ

ಮಾಡುತ್ತವೆ. ಇವತ್ತಿನದಿವಸ ಇದರ ಸಾಧಕಬಾಧಕಗಳು ಇನ್ನಷ್ಟು ಹೆಚ್ಚು ನಮ್ಮ ಅನುಭವಕ್ಕೆ ಬರಬೇಕಾಗಿರತಕ್ಕಂಥ ಅಗತ್ಯತೆ ಇವೆ. ಇದರಿಂದ ರೈತರಿಗೆ ಮತ್ತು ಸಾಮಾನ್ಯ ಜನರಿಗೆ ತೊಂದರೆ ಆದರೆ ಇದನ್ನು ವಾಪಸ್ಸು ತೆಗೆದುಕೊಳ್ಳಬಹುದೆಂದು ತಾವು ಹೇಳಿರುವುದರಿಂದ ಇದರ ಬಗ್ಗೆ ಇಲಾಖೆಗಳಲ್ಲಿ ಗೊಂದಲ ಉಂಟಾಗುವುದಲ್ಲದೆ ಸಾಮಾನ್ಯ ಜನರಲ್ಲಿ ಮತ್ತು ಬೇರೆ ಬೇರೆ ಅಸೋಸಿಯೇಷನ್‌ನಲ್ಲಿಯೂ ಕೂಡ ಗೊಂದಲ ಪ್ರಾರಂಭವಾಗಿದೆ. ಮಾನ್ಯ ಹಣಕಾಸಿನ ಸಚಿವರಾಗಿತಕ್ಕಂಥ ಶ್ರೀ ಸಿದ್ದರಾಮಯ್ಯನವರು ವ್ಯಾಟ್‌ನ್ನು ನಾವು ಯಾವಾಗ ಬೇಕಾದರೂ ವಾಪಸ್ಸು ತೆಗೆದುಕೊಳ್ಳಬಹುದೆಂದು ಹೇಳುತ್ತಿದ್ದಾರೆ. ಆದ್ದರಿಂದ, ಇದನ್ನು ಜಾರಿಗೆ ತರುತ್ತಾರೆಯೋ ಅಥವಾ ಇಲ್ಲವೋ ಎಂದು ನನಗೆ ಎರಡು ಮೂರು ಜನ ಕೇಳಿದ್ದಾರೆ. ಆದರೆ, ತಾವು ಹೇಳಿರತಕ್ಕಂಥ ಸ್ಪಿರಿಟ್‌ನ್ನು ನಾನು ಅರ್ಥಮಾಡಿಕೊಳ್ಳಬಹುದು. ಏಕೆಂದರೆ, ರೈತರಿಗೆ ಮತ್ತು ಸಾಮಾನ್ಯ ಜನರಿಗೆ ತೊಂದರೆಯಾದರೆ ನಾವು ಹಿಂದೆ ಹೋಗುವುದಕ್ಕೆ ತಯಾರು ಇದ್ದೇವೆಂದು ತಾವು ಹೇಳಿದ್ದೀರಿ. ಹಾಗಾದರೆ, ಒಂದು ರಾಜಕೀಯ ಇಚ್ಛಾಶಕ್ತಿಯನ್ನು ಅವಲಂಬಸಿ, ಇದು ಜಾರಿಗೊಳ್ಳುತ್ತಿದೆ ಎಂಬುದು ನಮ್ಮ ಕಣ್ಣು ಮುಂದೆ ಇರುವಂಥದ್ದು. ನಾವು ಕೊಡತಕ್ಕಂಥ ಹೇಳಿಕೆಯಲ್ಲಿ ಎಲ್ಲೋ ಒಂದು ಕಡೆ ಗೊಂದಲಗಳು ವ್ಯಕ್ತವಾದರೆ ಆಗ ಕನ್‌ಫ್ಯೂಷನ್ ಆಗುತ್ತದೆ. ಇಂಥ ಸಂದರ್ಭದಲ್ಲಿ ಬಹಳಷ್ಟು ಜಾಗರೂಕತೆಯಿಂದ ಇದನ್ನು ಜಾರಿಗೆ ತರುತ್ತೇವೆಂಬ ಇಚ್ಛಾಶಕ್ತಿ ಇದ್ದರೆ ಅದನ್ನು ಈ ಸಂದರ್ಭದಲ್ಲಿ ಹೇಳತಕ್ಕಂಥ ಅಗತ್ಯತೆ ಇದೆ. ಮತ್ತೆ ಹಣಕಾಸು ದೃಷ್ಟಿಯಿಂದ ರಾಜ್ಯದ ಹಿತಾಸಕ್ತಿಯನ್ನು ಯಾವುದೇ ಕಾರಣಕ್ಕೂ ಕೂಡ ಬಲಿ ಕೊಡುವುದಕ್ಕೆ ಅವಕಾಶ ಕೊಡಬಾರದು. ಏಕೆಂದರೆ, ನಾವು ಈಗ ವ್ಯಾಟ್‌ನ್ನು ಅಳವಡಿಸಿಕೊಂಡು ನಮಗೆ ನಷ್ಟವಾದರೆ ಇದಕ್ಕೆ ಕೇಂದ್ರ ಸರ್ಕಾರ ಏನೊಂದು ಕಾರಣವನ್ನು ಹೇಳಿ ನಮಗೆ ಆಗಿರತಕ್ಕಂಥ ನಷ್ಟವನ್ನು ನೀವೇ ಭರಿಸಿಕೊಳ್ಳಬೇಕೆಂದು ಹೇಳಿದರೆ ನಮ್ಮ ಪ್ಲಾನ್‌ನಲ್ಲಿ ಮತ್ತೆ ತೊಂದರೆ ಅಗತಕ್ಕಂಥದ್ದು ಬೇಡ. ಈ ರೀತಿ ಆಗಬಾರದೆಂದು ನಾವೂ ಕೂಡ ಹೇಳುತ್ತೇವೆ. ಇದರ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಸಾಕಷ್ಟು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮತ್ತೆ ಈ ವಿಷಯದ ಬಗ್ಗೆ ಅನುಭವ ಮತ್ತು ಪರಿಪೂರ್ಣತೆ ಹಾಗೂ ಇದರ ಬಗ್ಗೆ ಅಧ್ಯಯನ ಕೂಡ ಮಾನ್ಯ ಸಚಿವರು ಮಾಡಿದ್ದಾರೆ. ಆದ್ದರಿಂದ ರಾಜ್ಯದ ಹಿತವನ್ನು ಯಾವುದೇ ಕಾರಣಕ್ಕೂ ಬಲಿಕೊಡುವುದಿಲ್ಲ ಎಂಬ ವಿಶ್ವಾಸ ನಮಗೆ ಇದೆ. ಆದರೆ, ಇವತ್ತಿನದಿವಸ ಅಧಿಕಾರಿಗಳ ಮಟ್ಟದಲ್ಲಿ ಮತ್ತು ಕೇಂದ್ರ ಸರ್ಕಾರದ ಮಟ್ಟದ ಬಗ್ಗೆ ಹೇಳುವುದಾದರೆ, ನಾವು ಚಾಪೆ ಕೆಳಗೆ ನುಸುಳಿದರೆ ಅವರು ರಂಗೋಲಿ ಕೆಳಗೆ ನುಸುಳುತ್ತಾರೆ ಅದ್ದರಿಂದ ನಮ್ಮ ಹಿತವನ್ನು ಯಾವುದೇ ಕಾರಣಕ್ಕೂ ಅದರಲ್ಲಿ ಬಲಿ ಆಗದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿರತಕ್ಕಂಥ ಅಗತ್ಯತೆ ಇದೆ. ಈ ಸಂಗತಿಯನ್ನು ಈ ಸಂದರ್ಭದಲ್ಲಿ ನಾನು . . .

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ವಿಶ್ವೇಶ್ವರ ಹೆಗಡೆಯವರೆ, this has no relevance to the existing proposed amendment.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಅವರಿಗೇನಾದರೂ ಮಾತನಾಡಬೇಕೆಂದು ತುರ್ತು ಇದ್ದರೆ ಅವರಿಗೆ ಅವಕಾಶ ಕೂಡಿ ಬೇಕಾದರೆ ನಾನು ಅನಂತರ ಮಾತನಾಡುತ್ತೇನೆ. ಅವರೇನಾದರೂ ಬೇರೆ ಕಡೆ ಹೋಗಬೇಕಾದರೆ ಅವರು ಮಾತನಾಡಲಿ.

ಅಧ್ಯಕ್ಷರು:– ನೀವು ಬೇಗ ಮಾತನಾಡಿ ಮುಗಿಸಿ. ಅನಂತರ ಅವರು ಮಾತನಾಡುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ನನಗೂ ಕೂಡ ಮಾತನಾಡುವುದಕ್ಕೆ ಬರುತ್ತದೆ. ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದೇನೆಂದರೆ, ಅವರು ಸುಮ್ಮನೆ ಸುತ್ತಾಡಿಕೊಂಡು ಮಾತನಾಡುತ್ತಾ, ನಿಮಗೆ ಅರ್ಜೆಂಟ್ ಇದ್ದರೆ ಮಾತನಾಡಿ ಎಂದು ನಮ್ಮನೆ ಹೇಳಿದರೆ ಹೇಗೆ? ಹಾಗಾದರೆ ನಾವು ಮಾನ್ಯ ಅಧ್ಯಕ್ಷರನ್ನು ಕೇಳುವುದು ತಪ್ಪೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನೀವು ಮಾತನಾಡಬೇಕಾದರೆ ಮಾತನಾಡಿ. ಅನಂತರ ನಾನು ಮಾತನಾಡುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಹಾಗಾದರೆ, ನಾವು ನಿಂತುಕೊಂಡಿರತಕ್ಕದ್ದು ತಪ್ಪೇ? ಅರ್ಜನ್ಸಿ ಮತ್ತು ಎಮರ್ಜೇನ್ಸಿ ನಮಗೆ ಗೊತ್ತಿದೆ.

ಅಧ್ಯಕ್ಷರು:– ಆಯಿತು, ಈಗ ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಿರಿಯ ಸದಸ್ಯರಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ಇದನ್ನು ಮುಗಿಸುವುದಕ್ಕೆ ಬಯಸುತ್ತಿದ್ದೇನೆ. ಇವತ್ತಿನದಿವಸ ರಾಜ್ಯದ ಹಿತವನ್ನು ಕಾಪಾಡಿಕೊಳ್ಳುವುದಕ್ಕೆ ಬೇಕಾಗಿರತಕ್ಕಂಥ ಪ್ರಮುಖವಾದಂಥ ಕೆಲಸಗಳು ಮುಖ್ಯವಾಗಿ ಆಗಬೇಕು. ಇದರ ಬಗ್ಗೆ ಎಂಪವರ್ ಕಮಿಟಿ ಏನು ಸಲಹೆ ಕೊಟ್ಟಿದೆ ಮತ್ತು ಇತರೆ ಏನು ಸಲಹೆ ಸೂಚನೆಗಳನ್ನು ಕೊಟ್ಟಿದೆ ಅದನ್ನು ವಾಪಕವಾಗಿ ಪ್ರಚಾರಗೊಳಿಸಬೇಕು. ಅಂದರೆ ಇದನ್ನು ಎಲ್ಲಾ ಸಂಘ ಸಂಸ್ಥೆಗಳಿಗೆ ಮತ್ತು ಜನತೆಗೆ ತಿಳಿಸಬೇಕು ಮತ್ತು ಇದರ ಬಗ್ಗೆ ವಿಶೇಷ ಜಾಗ್ರತೆ ಮೂಡಿಸುವಂಥ ಕೆಲಸ ಕೂಡ ಆಗಬೇಕು. ಹಾಗೆಯೇ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಮುಂದಾಗಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ(ಚಿಕ್ಕನಾಯಕನ ಹಳ್ಳಿ):– ಮಾನ್ಯ ಅಧ್ಯಕ್ಷರೆ, ತಾವು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಅವರು ಮಾತನಾಡುವಂಥ ಸಂದರ್ಭದಲ್ಲಿ ರಾಜ್ಯದ ಹಿತ ಕಾಪಾಡಿ ಎಂದು ಹೇಳಿದಾಗ ಮುಗಿಸಿದರು ಎಂದು ತಿಳಿದುಕೊಂಡು ಆ ಸಂದರ್ಭದಲ್ಲಿ ನಾನು ಎದ್ದು ನಿಂತುಕೊಂಡೆ. ಅನಂತರ ಅವರು ಏನು ಮಾತನಾಡಿದರೆಂಬುದು ತಮಗೆ ಗೊತ್ತಿದೆ. ಈ ಪ್ರಸ್ತುತ ಬಿಲ್ ಬಗ್ಗೆ ಮಾತ್ರ ನಾನು ಮಾತನಾಡುವುದಕ್ಕೆ ಇಷ್ಟಡುತ್ತೇನೆ. ಸನ್ಮಾನ್ಯ ಅರ್ಥಸಚಿವರು ಥರ್ಡ್ ಶೆಡ್ಯೂಲ್‌ಗೆ ಐಟಂಗಳನ್ನು ತಂದಿದ್ದಾರೆ. ಆದ್ದರಿಂದ, ಇದನ್ನು ಎಲ್ಲಿಂದ ತಂದಿದ್ದಾರೆಂಬುದನ್ನು ಮಾನ್ಯ ಸಚಿವರು ನಮಗೆ ಸ್ಪಷ್ಟಪಡಿಸಬೇಕಾಗಿದೆ. ಮೂರನೇ ಶೆಡ್ಯೂಲ್‌ಗೆ ಅಮೆಂಡ್‌ಮೆಂಟ್ ಮಾಡಿ ಕೆಲವು ಐಟಂಗಳನ್ನು ತಾವು ಇದಕ್ಕೆ ಸೇರಿಸುತ್ತಿದ್ದೀರಿ. ಆದ್ದರಿಂದ, ಇದು ಫರ್ಸ್ಟ್ ಅಥವಾ ಸೆಕೆಂಡ್ ಶೆಡ್ಯೂಲ್‌ನಿಂದ ಬಂದಿದ್ದರೆ, it naturally attracts more tax. ಆದ್ದರಿಂದ, ಇದಕ್ಕೆ ಸಂಬಂದಪಟ್ಟಂತೆ ತಾವು ಒಂದು ಮಾಹಿತಿಯನ್ನು ಕೊಡಬೇಕಾಗುತ್ತದೆ. Second schedule rate 1%; 3rd schedule rate 4% and 4th schedule rate 12 1/2% ....

ಈ ರೀತಿಯಾಗಿ ತಾವು ಸ್ಲ್ಯಾಬ್ ಇಟ್ಟುಕೊಂಡಿದ್ದೀರಿ. ಮೂರನೇ ಶೆಡ್ಯೂಲ್‌ಗೆ ಅಮೆಂಡ್‌ಮೆಂಟ್ ಮಾಡಿ ಕೆಲವೊಂದು ಐಟಂಗಳನ್ನು ಹೊಸದಾಗಿ ಸೇರಿಸುತ್ತಿದ್ದಿರಿ. Bagasse, Centrifugal, monobloc and submersible pumps, clay, embroidery, fireclay, lignite, lime, ಇವೆಲ್ಲವನ್ನೂ ಸೇರಿಸುತ್ತಿದ್ದೀರಿ. ಇದು 3ನೇ ಷೆಡ್ಯೂಲ್‌ಗೆ ಬರಬೇಕಾದರೆ ಅದು ಮೊದಲು ಯಾವ

ಷೆಡ್ಯೂಲ್‌ನಲ್ಲಿತ್ತು ಎಂಬ ಬಗ್ಗೆ ನೋಟ್‌ನ್ನು ಕೊಡಬೇಕಾಗಿತ್ತು. ಏಕೆಂದರೆ, by taking them from somewhere, ಎಲ್ಲಿಂದಲೋ ತಂದು ಇನ್ನೊಂದು ಷೆಡ್ಯೂಲಿಗೆ ಸೇರಿಸುವಾಗ ಆಟೋಮ್ಯಾಟಿಕ್ ಆಗಿ ಟ್ಯಾಕ್ಸ್ ಜಾಸ್ತಿಯಾಗುವುದಾದರೆ ಇದರ ಬಗ್ಗೆ ಸ್ವಲ್ಪ ಅಲೋಚನೆಯನ್ನು ಮಾಡಬೇಕಾಗುತ್ತದೆ. I don't think. ನೀವು ವ್ಯಾಟ್‌ಗೆ ಹೋಗಬೇಕೋ ಅಥವಾ ಬೇಡವೋ ಎಂಬ ಬಗ್ಗೆ ಇಲ್ಲಿ ಚರ್ಚೆಯನ್ನು ಮಾಡುತ್ತಿಲ್ಲ. That is a finished chapter for the Karnataka State. ಅದು ಮುಗಿದುಹೋಗಿದೆ. ಇಲ್ಲಿ ತಾವು ಮೊದಲಿನಿಂದಲೂ ಹೇಳಿಕೊಂಡು ಬಂದಿರುವುದು, ಒಂದು ನೋಟ್ ಕೊಟ್ಟಿದ್ದರೆ ನಮಗೆ ರೆಫರೆನ್ಸ್ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಅದರಲ್ಲಿ bambooನಿಂದ ಹಿಡಿದು ಬರೀ ಅಮೆಂಡ್‌ಮೆಂಟ್-ಥರ್ಡ್ ಷೆಡ್ಯೂಲ್ ಎಂದು ಮಾಡಿದಾಗ where this is further amended? ಎಲ್ಲಿಂದ ತೆಗೆದು ಎಲ್ಲಿಗೆ ಕೊಡುತ್ತಿದ್ದೀರಿ ಎಂದು ಹೇಳಿದರೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮೊದಲು ತಾವು ನಮಗೆ ನೋಟ್‌ನ್ನು ಕೊಡಿಸಿಕೊಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಥರ್ಡ್ ಷೆಡ್ಯೂಲ್‌ನ್ನು ನೀವು ಅಮೆಂಡ್‌ಮೆಂಟ್ ಮಾಡಿದ್ದೀರಲ್ಲಾ, ನೀವು ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಸಿದ್ದರಾಮಯ್ಯ(ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರೆ, ಇದರ ಬಗ್ಗೆ ಮೊದಲು ಬಜೆಟ್‌ನಲ್ಲಿ ಚರ್ಚೆ ಮಾಡಿದ್ದೇವೆ. ನಮ್ಮ ಹತ್ತಿರ 3 ರೇಟ್‌ಗಳು ಇವೆ, ಬೇಸಿಕ್ ರೇಟ್ಸ್ 4, 8, 12, ಈ ರೇಟ್‌ಗಳ ಸ್ಲ್ಯಾಬ್ ಇವೆ. ಒಂದು ಮೊದಲಿನಿಂದಲೂ ಇತ್ತು, ಈಗಲೂ ಕೂಡ ಇದೆ. ಅದರಲ್ಲಿ ಏನು ಈ ಬುಲಿಯನ್ ಇದೆಯಲ್ಲಾ, ಚಿನ್ನ ಮತ್ತು ಬೆಳ್ಳಿ, ಒಡವೆಗಳು ಇವೆಲ್ಲಕ್ಕೂ ಒಂದು ಪರ್ಸೆಂಟ್ ಇತ್ತು, ವ್ಯಾಟ್ ಬಂದಾಗಲೂ ಕೂಡ ಒಂದು ಪರ್ಸೆಂಟೇ ಮುಂದುವರಿಯುತ್ತದೆ. ಅದರಲ್ಲಿ ಏನು ವ್ಯತ್ಯಾಸಗಳು ಅಗಿಲ್ಲ. ಕೆಲವು zero ರೇಟ್ ಸೇರಿರಲಿಲ್ಲ. ಮತ್ತೇ ಎಂಪವರ್ ಕಮಿಟಿಯಲ್ಲಿ zero ರೇಟ್‌ಗೆ ಸೇರಿಸಿದ್ದೇವೆ. ಅದಕ್ಕೆ ಅಮೆಂಡ್‌ಮೆಂಟ್ ಕೆಲವಕ್ಕೆ 8 ಪರ್ಸೆಂಟ್‌ರೇಟ್ ಇದ್ದದ್ದು 4 ಪರ್ಸೆಂಟ್ ರೇಟ್ ಆಗಿದೆ. ಕೆಲವು 4 ಪರ್ಸೆಂಟ್‌ನಲ್ಲಿಯೇ ಬಂದಿದೆ. ಮೊದಲು ಸ್ಟಾಂಡರ್ಡ್ ರೇಟ್ 25 ಪರ್ಸೆಂಟ್ ಎಂದು ಇತ್ತು, ಅದಕ್ಕೆ ಷೆಡ್ಯೂಲ್ ಏನು ಇರಲಿಲ್ಲ ಈಗ ಫಸ್ಟ್ ಷೆಡ್ಯೂಲ್‌ನಲ್ಲಿದೆಯಲ್ಲಾ ಥರ್ಡ್ ಷೆಡ್ಯೂಲಿನವು, 4 ಪರ್ಸೆಂಟ್ ಯಾವುದು ಇತ್ತೋ ಅದು ಹಾಗೆಯೇ 4 ಪರ್ಸೆಂಟ್‌ನಲ್ಲೇ ಉಳಿದುಕೊಂಡಿದೆ. ಕೆಲವು ಹೊಸದಾಗಿ 4 ಪರ್ಸೆಂಟ್‌ಗೆ ಫುಡ್‌ಗ್ರೈನ್ಸ್ ಇರಲಿಲ್ಲ, ಫಸ್ಟ್ ಷೆಡ್ಯೂಲ್‌ನಲ್ಲಿ ಮೊದಲು ಅಕ್ಕಿ ಮತ್ತು ಗೋಧಿ ಇರಲಿಲ್ಲ. ಅವು ಈಗ ಅಲ್ಲಿಗೆ ಬಂದಿದೆ. ಈಗ ಅದು 4 ಪರ್ಸೆಂಟ್‌ಗೆ ಬಂದಿದೆ. ಇದಕ್ಕೂ ಕೂಡ ಈಗ ತಕರಾರು ಇದೆ. ತಮಿಳುನಾಡಿನವರು 4 ಪರ್ಸೆಂಟ್‌ಗೆ ಅಕ್ಕಿಯ ಬಗ್ಗೆ ಎಂಪವರ್ ಕಮಿಟಿಯಲ್ಲಿ ಏನು ತೀರ್ಮಾನವನ್ನು ಮಾಡಿದ್ದಾರೆ, ಅದಕ್ಕೆ ಎಕ್ಸೆಂಪ್ಷನ್ ಬೇಕು ಎಂದು ಅವರು ವಾದವನ್ನು ಮಂಡಿಸಿದ್ದಾರೆ, ನಾವು ಎಂಪವರ್ ಕಮಿಟಿಯಲ್ಲಿ ಏನು ವಾದ ಮಾಡಿದ್ದೇವೆಂಬದರೆ, ಅವರಿಗೆ ಅಕ್ಕಿಯ ಬಗ್ಗೆ ಎಕ್ಸೆಂಪ್ಷನ್ ಕೊಡುವುದಾದರೆ ನಾವು ಎಕ್ಸೆಂಪ್ಟ್ ಮಾಡಬೇಕಾಗುತ್ತದೆ. Because it is a neighbouring State. ನಮಗೆ ಲಾಸ್ ಆಗುತ್ತದೆ. ಅದರ ಬಗ್ಗೆ ಎಂಪವರ್ ಕಮಿಟಿಯಲ್ಲಿ ಏನು ತೀರ್ಮಾನವಾಗಿದೆ ನೀವು ಎಕ್ಷ್‌ಮಷನ್ ಕೊಟ್ಟರೆ whatever we are going to incur loss by exemptiong rice from 4%, from VAT, ಅದನ್ನು ತುಂಬಿಕೊಡಬೇಕೆಂಬ ಬಗ್ಗೆ ವಾದವನ್ನು ಇಟ್ಟಿದ್ದೇವೆ.

ಅದನ್ನು ಮಾಡುತ್ತೇವೆಂದು ಅವರು ಒಪ್ಪಿಕೊಂಡಿದ್ದಾರೆ. ಎಕ್ಸೆಪ್ಟ್ ಉತ್ತರಪ್ರದೇಶ ಬಿಟ್ಟರೆ ಎಲ್ಲಾ ರಾಜ್ಯಗಳೂ ಕೂಡ ಇದಕ್ಕೆ ಒಪ್ಪಿಕೊಂಡಿವೆ. ಯು.ಪಿ. ಮಾತ್ರ ಇನ್ನೂ ಒಪ್ಪಿರುವುದಿಲ್ಲ. ಬಹುಶಃ ಅವರು ಇವತ್ತಿನವರೆಗೆ ಎಲ್ಲಾ ಎಂಪವರ್ ಕಮಿಟಿಗೆ ಬಂದಿದ್ದಾರೆ. ಅದರ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ. ವ್ಯಾಟ್ ಕಾನೂನು ಮಾಡಿಲ್ಲ, ಅವರು ಏನು ಮಾಡಿಲ್ಲವುದಿಲ್ಲ. ಉತ್ತರಪ್ರದೇಶದವರು ಹಾಗೆಯೇ ಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಚಿದಂಬರಂರವರು ಏನು ಹೇಳಿದರು ಎಂದರೆ, ಅಲ್ಲಿ ರಾಜ್ಯಕ್ಕೆ ಹೋಗುತ್ತೇನೆ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ. ಇದರ ಬಗ್ಗೆ ಮಾತನಾಡಿ ಅವರನ್ನು ಒಪ್ಪಿಸುವ ಬಗ್ಗೆ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಿದ್ದಾರೆ. ಇದರಲ್ಲಿ ತಮಿಳುನಾಡಿನವರೂ ಕೂಡ ಒಪ್ಪಿಕೊಂಡಿದ್ದಾರೆ. ಪಾಂಡಿಚೇರಿಯವರೂ ಸಹ ಒಪ್ಪಿಕೊಂಡಿದ್ದಾರೆ. ರಾಜಸ್ಥಾನವೂ ಒಪ್ಪಿಕೊಂಡಿದೆ, ಯಾರ್ಯಾರ ಸ್ವಲ್ಪ ಆಕ್ಷೇಪಣೆ ಇತ್ತು . . . .

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾವ ಷೆಡ್ಯೂಲ್‌ನಿಂದ ಡಿಲಿಟ್ ಮಾಡಿ ಫಸ್ಟ್ ಷೆಡ್ಯೂಲ್‌ಗೆ ಹಾಕಿದ್ದೀರಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ರೆಡ್ಡಿಯವರೆ, ಯಾವ ಸೆಕ್ಷನ್ ಅದರ ಬಗ್ಗೆ ಹೇಳಿ.

J.C.Madhuswamy:- which you have proprosed to include in the thrird schedule, ಮೊದಲು ಎಲ್ಲಿ ಇತ್ತು ಮೊದಲು ನೋಟ್‌ನ್ನು ಕೊಡಬೇಕಾಗಿತ್ತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನೀವು ಸೇರಿಸಿರುವುದು ಅದು ಮೊದಲು ಎಲ್ಲಿತ್ತು?

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಷೆಡ್ಯೂಲ್ 3ಕ್ಕೆ ಅಮೆಂಡ್‌ಮೆಂಟ್ ತರುತ್ತಿದ್ದೀರಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಇದು ಇಲ್ಲಿ ಡಿಲಿಟ್ ಆಗಿದೆ ಅಷ್ಟೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಷೆಡ್ಯೂಲ್–1ಕ್ಕೂ ಅಮೆಂಡ್‌ಮೆಂಟ್ ಅನ್ನು ತರುತ್ತಿದ್ದೀರಿ, ಷೆಡ್ಯೂಲ್–3ಕ್ಕೂ ತರುತ್ತಿದ್ದೀರಿ, ಷೆಡ್ಯೂಲ್–1ರಲ್ಲಿರುವ ಐಟಂ ಷೆಡ್ಯೂಲ್–3ಕ್ಕೆ ಬಂದರೆ ನಾವು ಇಲ್ಲಿ ಅಬ್ಜೆಕ್ಟ್ ಮಾಡಬೇಕಾಗುತ್ತದೆ. ಏಕೆಂದರೆ ಒಂದು ಪರ್ಸೆಂಟ್ ಟ್ಯಾಕ್ಸ್ ಇರುವುದು 4 ಪರ್ಸೆಂಟ್ ಏತಕ್ಕಾಗಿ ಮಾಡುತ್ತಿದ್ದೀರಿ? ನೀವು ಕೊಟ್ಟಿರುವ ಐಟಂನ್ನು ನೋಡಿ.

ಶ್ರೀ ಸಿದ್ದರಾಮಯ್ಯ: ಅಲ್ಲಿಗೆ ಯಾವುದೂ ಬರುತ್ತಿಲ್ಲ. ಯಾವುದು ಒಂದು ಪರ್ಸೆಂಟ್ ಇತ್ತು ಅದು ಅಲ್ಲಿಯೇ ಇದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಷೆಡ್ಯೂಲ್–2ರಲ್ಲಿ ಇದ್ದದ್ದು ಯಾವುದು?

ಶ್ರೀ ಸಿದ್ದರಾಮಯ್ಯ: ಷೆಡ್ಯೂಲ್–2ರಲ್ಲಿ ಇದ್ದದ್ದು ಈಗ ಅದು 4 ಪರ್ಸೆಂಟ್‌ನಲ್ಲಿದೆ ಕೆಲವು 12 1/2ಪರ್ಸೆಂಟ್ ಆಗಿದೆ. Not all. But ಅದೆಲ್ಲಾ ಯಾವುದು ಎಂಬ ವಿವರ ಬೇಕಾದರೆ ಓದುತ್ತೇನೆ. ಯಾವುದು ಎಲ್ಲಿದೆ ಎಂದು ಬೇಕಾದರೆ ಓದುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವೆಲ್ಲವನ್ನೂ ಓದುವುದು ಬೇಕಾಗಿಲ್ಲ. 3ನೇ ಷೆಡ್ಯೂಲ್‌ನಲ್ಲಿ ಸೇರಿಸಿದ್ದೀರಲ್ಲಾ ಆ ಐಟಂನ್ನು ಯಾವ ಷೆಡ್ಯೂಲ್‌ನಿಂದ ಡಿಲಿಟ್ ಮಾಡಿದ್ದೀರಿ ಎಂದು ನಾವು ಕೇಳಿರುವುದು. ಮೊದಲು ಅವು ಯಾವ ಷೆಡ್ಯೂಲ್‌ನಲ್ಲಿತ್ತು. ಉದಾ: ಬೈಸಿಕಲ್, ಬೈಸಿಕಲ್‌ನ ಜೋಡಣೆಗಳು ಇವೆಲ್ಲವೂ ಇದೆಯಲ್ಲಾ, ಇವುಗಳು ಮೊದಲು ಯಾವ ಷೆಡ್ಯೂಲ್‌ನಲ್ಲಿತ್ತು?

ಶ್ರೀ ಸಿದ್ದರಾಮಯ್ಯ: ಮೊದಲು ಸೈಕಲ್ ಪಾರ್ಟ್‌ಗಳು ಎಕ್ಸೆಮ್ಷನ್ ಇತ್ತು. ಅವುಗಳೆಲ್ಲವನ್ನು 4 ಪರ್ಸೆಂಟ್‌ಗೆ ಹಾಕಿದ್ದೇವೆ. ಏಕೆಂದರೆ, ವ್ಯಾಟ್‌ನ ಉದ್ದೇಶವೇ ಟ್ಯಾಕ್ಸ್ ಬೇಸ್ ಅನ್ನು ವಿಸ್ತಾರ ಮಾಡುಬೇಕೆಂದು, ಇದು ನಮ್ಮ ರಾಜ್ಯದ ಅಭಿಪ್ರಾಯವಲ್ಲ. ಇಡೀ ಎಲ್ಲಾ ರಾಜ್ಯಗಳ ಎಂಪವರ್

ಕಮಿಟಿಯಲ್ಲೂ ಕೂಡ ಟ್ಯಾಕ್ಸ್ ಬೇಸ್ ಅನ್ನು ವಿಸ್ತಾರ ಮಾಡಬೇಕು, ಅದನ್ನು ವಿಸ್ತಾರ ಮಾಡಬೇಕಾದರೆ ರೀಸೋರ್ಸೆಸ್ ಹೆಚ್ಚಾಗಬೇಕಾದರೆ ವಿಸ್ತಾರ ಮಾಡದೆ ಹೋದರೆ ಆಗುವುದಿಲ್ಲ. ಬಹಳಷ್ಟು ಎಕ್ಸ್‌ಮೆಪ್ಷೆಸ್‌ನ್ನು ಕೊಡುವುದಕ್ಕಾಗುವುದಿಲ್ಲ. ಯಾವುದು ಬಡವರಿಗೆ ಸಂಬಂಧಪಡುತ್ತವೆ. ಜೀವರಕ್ಷಕ ಔಷಧಿಗಳಿಗೆ ಸಂಬಂಧಪಡುತ್ತದೆ, ಯಾವುದು ಅತ್ಯಂತ ಸಾಮಾನ್ಯ ಕಡುಬಡವರಿಗೆ ಸಂಬಂಧಪಡುತ್ತದೆ ಅದನ್ನು zero ರೇಟ್‌ನಲ್ಲಿ ಸೇರಿಸಿದ್ದೇವೆ. ಜೀರೋ ರೇಟ್‌ನಲ್ಲಿ ಕೆಲವನ್ನು ತಾವು ನೋಡಬಹುದು.

ಶ್ರೀ ಜೆ.ಸಿ.ಮಾಧುಸ್ವಾಮಿ: ಜೀರೋ ರೇಟ್‌ನಲ್ಲಿ ಸೇರಿಸಬೇಕಾದರೆ ರಾಜ್ಯಸರ್ಕಾರ ಇದರ ಬಗ್ಗೆ ಬಹಳ ಗಹನವಾಗಿ ವಿಚಾರ ಮಾಡಿ ಇವೆಲ್ಲವೂ ಬಡವರಿಗೆ ಅಗತಕ್ಕದ್ದು ಇದರ ಮೇಲೆ ಸೇಲ್ಸ್ ಟ್ಯಾಕ್ಸ್‌ನ್ನು ಹಾಕಬಾರದು. ಇಂತಹವುಗಳ ಬಗ್ಗೆ ವಿನಾಯಿತಿಯನ್ನು ಕೊಡಬೇಕೆಂದು ಮಾಡಿ ಈಗ ನಮ್ಮ ಅಟಾನಮಿಯನ್ನು ಉಳಿಸಿ ಕೊಳ್ಳಬೇಕು ಎಂದು ನೀವು ಇಲ್ಲಿ ನಿಂತುಕೊಂಡು ಭಾಷಣ ಮಾಡಿ, ಯಾರು ಹೇಳಿದ್ದಾರೆಂದು ಅದರ ಮೇಲೆ 4 ಪರ್ಸೆಂಟ್ ಟ್ಯಾಕ್ಸ್ ಹಾಕುವುದಕ್ಕೆ ಹೊರಟರೆ ಈ ರಾಜ್ಯದ ಎಕಾನಮಿಗೆ ಸ್ವಾಯತ್ತತೆ ಉಳಿದಿದೆ ಎಂದು ಹೇಳಿಕೊಳ್ಳುವುದಕ್ಕಾಗುತ್ತದೆಯೇ

ಶ್ರೀ ಸಿದ್ದರಾಮಯ್ಯ: ಸ್ವಾಯತ್ತತೆಗೆ ತೊಂದರೆ ಏನು ಇಲ್ಲ. ಅದು ನಮ್ಮದು ಕೂಡ ಅಭಿಪ್ರಾಯ, ಯಾವುದೇ ತೆರಿಗೆಯನ್ನು ವಿಸ್ತಾರ ಮಾಡಬೇಕಾದರೆ ಯಾವದನ್ನು ಮಾಡಬೇಕೆಂಬುದರ ಬಗ್ಗೆ ನಾವು ಅಭಿಪ್ರಾಯವನ್ನು ಕೊಟ್ಟಿದ್ದೇವೆ. ಒಟ್ಟಾರೆಯಾಗಿ ಎಲ್ಲಾ ರಾಜ್ಯಗಳು ಸೇರಿಕೊಂಡು ಇಂತಹ ಐಟಂಗಳನ್ನು 4 ಪರ್ಸೆಂಟ್‌ಗೆ ಸೇರಿಸಬೇಕೆಂದು ಅಭಿಪ್ರಾಯಕ್ಕೆ ಬಂದಿದೆ. ಅದಕ್ಕಾಗಿ ಸ್ವಾಯತ್ತತೆಗಳನ್ನು ಅಡ್ಡ ಇಟ್ಟಿದ್ದೇವೆಂದು ಅಲ್ಲ. ಅದಕ್ಕೋಸ್ಕರವೇ ಎಂಪವರ್ ಕಮಿಟಿ ಆಗ್ಗಿಂದಾಗ್ಗೆ ಭೇಟಿ ಮಾಡುತ್ತದೆ, ಯಾವುದಾದರೂ ತೊಂದರೆಯಾದರೆ ಅದನ್ನು ನಾವು ರಿವ್ಯೂ ಮಾಡಿ ತೀರ್ಮಾನ ಮಾಡುವುದಕ್ಕೂ ಕೂಡ ಅವಕಾಶ ಇದೆ. ಹಾಗೆಂದು ಸ್ವಾಯತ್ತತೆಯನ್ನು ಅಡವಿಟ್ಟಿದ್ದೇವೆಂದು ಅಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ತಾವು ಕಳೆದ 5 ವರ್ಷಗಳ ಹಿಂದೆ ಹಣಕಾಸಿನ ಸಚಿವರಾಗಿದ್ದಾಗ ಎಲ್ಲೆಲ್ಲಿ ಬೇಸ್‌ನ್ನು ವೈಡನ್ ಮಾಡಿಕೊಳ್ಳಬಹುದು ಮಾಡಿಕೊಂಡು ಬಿಟ್ಟಿದ್ದೀರಿ. ಇದರ ಬಗ್ಗೆ ಪ್ರತಿ ಭಾಷಣದಲ್ಲಿಯೂ ಹೇಳಿದ್ದೀರಿ. We are approaching fast. Fast approaching VAT, ಅದಕ್ಕೋಸ್ಕರವೇ ಬೇಸ್‌ನ್ನು ವಿಸ್ತಾರ ಮಾಡುತ್ತಿದ್ದೇವೆ, though there is some schedule of items, ಟ್ಯಾಕ್ಸ್ ಫ್ರೀ ಇದ್ದರೂ ಕೂಡ ಏತಕ್ಕಾಗಿ ಟ್ಯಾಕ್ಸ್ ಏರಿಯಾಕ್ಕೆ ತರುತ್ತಿದ್ದೇವೆಂದರೆ ಮುಂದೆ ನಾನು ವ್ಯಾಟ್‌ಗೆ ಹೋಗಬೇಕಾಗಿದೆ, 5 ವರ್ಷದೊಳಗೆ ಐಟಂ ಅನ್ನು ಕವರ್ ಮಾಡಿಕೊಳ್ಳಬೇಕಾಗಿದೆ. It is a commitment before VAT ಎಂದು ತಾವು ಹೇಳಿದ್ದೀರಿ. ಅದೆಲ್ಲಾ ಆದ ಮೇಲೆ ಒಂದಿಷ್ಟು ಐಟಂಗಳು zero ಟ್ಯಾಕ್ಸ್ ಒಂದು ಪರ್ಸೆಂಟ್ ಟ್ಯಾಕ್ಸ್‌ನಲ್ಲಿ ಉಳಿದಿತ್ತು. ಈ ಹೊಸ ಅಮೆಂಡ್‌ಮೆಂಟ್‌ನಲ್ಲಿ ನೀವು ಮೆಮೋರ್ಯಾಂಡಮ್ ಅನ್ನು ಕೊಡುತ್ತೀರಿ, ಹಣಕಾಸಿನ ವಿಚಾರದಲ್ಲಿ ತೊಡಕಿಲ್ಲ, there is no extra expenditurue or income, ಇನ್‌ಕಮ್ ಎಂದು ಕೊಟ್ಟಿಲ್ಲ. Expenditure involved in printing the paper ಏನೋ ಹಾಗಾದರೆ ನನಗೆ ಗೊತ್ತಿರುವ ಮಟ್ಟಿಗೆ, there is expenditure involved. ನೀವು ಟ್ಯಾಕ್ಸ್ ಬೇಸ್‌ನಲ್ಲಿ zero ಐಟಂನಲ್ಲಿರುವುದು ಒಂದು ಪರ್ಸೆಂಟ್ ಟ್ಯಾಕ್ಸ್‌ನಲ್ಲಿರುವುದು ಒಂದು ಪರ್ಸೆಂಟ್ ಟ್ಯಾಕ್ಸ್‌ನಲ್ಲಿರುವುದು 1 ಮತ್ತು 2ನೇ ಷೆಡ್ಯೂಲ್‌ನಲ್ಲಿರುವುದನ್ನು 3ನೇ ಷೆಡ್ಯೂಲ್‌ಗೆ ತಂದು it attracts four to eight percent tax. ನೀವು ಫರ್ದರ್ ಟ್ಯಾಕ್ಸ್ ಮಾಡುವುದಕ್ಕಾಗಿ ಐಟಂಗಳನ್ನು ಜಾಸ್ತಿ ಮಾಡಿಕೊಳ್ಳುವುದು, ಅದು

ಬಜೆಟ್ ಇದ್ದಾಗ ಒಂದು ಬಿಲ್ ತೆಗೆದುಕೊಂಡು ಮಾಡುವುದು, ಅದು ಸರಿಯೇ ಎಂದು ನಾನು ಪ್ರಶ್ನೆಯನ್ನು ಮಾಡುತ್ತಿದ್ದೇನೆ. ಐಟಂ ಮೇಲೆ ಟ್ಯಾಕ್ಸ್ ಜಾಸ್ತಿ ಆಗುವ ಹಾಗೆ ಮಾಡಿಕೊಂಡಿದ್ದರೆ ಆಫ್‌ಕೋರ್ಸ್ ನಮ್ಮದೇನೂ ತೊಂದರೆ ಇರುವುದಿಲ್ಲ, By changing the schedule, ಆ ಷೆಡ್ಯೂಲಿನಿಂದ ಇನ್ನೊಂದು ಷೆಡ್ಯೂಲ್‌ಗೆ ತರುವುದರಿಂದ naturally it attracts more tax. ಟ್ಯಾಕ್ಸ್ ಹಾಕುವುದಿಲ್ಲ ನಾವು ಅಷ್ಟೇ ಇರುತ್ತದೆ ಎಂದು ನೀವು ಹೇಗೆ ಹೇಳುತ್ತೀರಿ? ಷೆಡ್ಯೂಲ್ ಚೇಂಜ್ ಮಾಡಿದ ಮೇಲೆ 2ನೇ ಷೆಡ್ಯೂಲ್‌ನಿಂದ 3ನೇ ಷೆಡ್ಯೂಲ್‌ಗೆ ಐಟಂನ್ನು ತಂದರೆ automatically tax will be more ಅಲ್ಲವೇ ಸಾರ್? That you have to re-consider. ಇನ್ನು ಎರಡನೆಯದಾಗಿ ನೀವು ಒಂದು ಪಾಯಿಂಟ್‌ನಲ್ಲಿ ಹೇಳಬೇಕಾಗಿತ್ತು. ಈಗ ಟ್ರೇಡಿಂಗ್ ಅಂಡ್ ಕಮಿಷನ್ ಏಜೆಂಟ್ಸ್ ಫಸ್ಟ್ ಅಂಡ್ ಸೆಕೆಂಡ್ ಪರ್ಚೇಸ್ ಇರುವ ಕಥೆಗಳಲ್ಲಿ ಈ ವ್ಯಾಟ್‌ನಲ್ಲಿ ಟ್ಯಾಕ್ಸ್‌ನ್ನು ಹೇಗೆ ನಿಗದಿಮಾಡುತ್ತೀರಿ ಎಂದು ಇಲ್ಲಿಯವರೆಗೆ ಎಲ್ಲಿಯೂ ಹೇಳಿಯೇ ಇರುವುದಿಲ್ಲ. I was going through the whole thing. ಎರಡು ಸೇಲ್ಸ್‌ನಲ್ಲಿ ಫಸ್ಟ್ ಅಂಡ್ ಸೆಕೆಂಡ್ ಸೇಲ್ಸ್‌ನ ಪ್ರಶ್ನೆ ಬಂದಾಗ ಒಂದು ಪಾಯಿಂಟ್‌ನಲ್ಲಿ ನೀವು ಮಾಡಬೇಕಾಗುತ್ತದೆ. ಟ್ಯಾಕ್ಸೇಷನ್ in accordance with your VAT. ನನ್ನದು ಕೊಬ್ಬರಿ ಮಾರುಕಟ್ಟೆ ಇದೆ. ಇಲ್ಲಿ ಕಮಿಷನ್ ಏಜೆಂಟ್ ಟ್ಯಾಕ್ಸ್‌ನ್ನು ಕೊಡುತ್ತಾನೆ. ಅಲ್ಲಿ ಟ್ರೇಡರ್ ಟ್ಯಾಕ್ಸ್‌ನ್ನು ಕೊಡುತ್ತಾನೆ. ಅದರ ಬಗ್ಗೆ ತಾವು ಹೇಳಬೇಕಲ್ಲವೇ? ಇಲ್ಲಿ ನಾನು 9(ಎ)ನ್ನು ಓದಿ, ಅಲ್ಲಿಗೆ ದೂರವಾಣಿ ಮಾಡಿ ಕೇಳಿ, ನೋಡಿದ್ದೇನೆ, deduction of tax at source, ಸೆಕ್ಷನ್-9ರಲ್ಲಿ ಡಿಡಕ್ಷನ್ ಎಂದು ಹೇಳಿದ್ದೀರಿ, ಸೆಟ್ ಒಂದೇ ಸಾರಿ ಅದನ್ನು ಕ್ಲೋಸ್ ಮಾಡಿಬಿಡಿ ಸಾರ್. ಇಲ್ಲಾ, ಒಂದೇ ಪಾಯಿಂಟ್. The first purchaser will automatically responsible for the payment of tax. ಎಂದು ಹೇಳಿಬಿಡಿ. ಎರಡುಕಡೆಗಳಲ್ಲಿ ಟ್ಯಾಕ್ಸ್‌ನ್ನು ಕಲೆಕ್ಟ್ ಮಾಡುವುದು, ಆಮೇಲೆ ಆ ಕೊಡುವ ಸಿಸ್ಟಮ್‌ನ್ನು ಏತಕ್ಕಾಗಿ ತರುತ್ತೀರಿ? ದಯಮಾಡಿ ತಾವು ಬಿಲ್‌ನ್ನು ಇಟ್ಟಿದ್ದೀರಿ, You please tell the House. ಒಂದು ಕಥೆ First purchaser or second purchaser will be responisble for the payment of the tax. Inter-state sale ಆಗುತ್ತದೆ. ಇಲ್ಲಿ ಯಾರೋ ಕೊಡುತ್ತಾರೆ, ಇನ್ನೆಲ್ಲೋ ಯಾರೋ ಮಾರುತ್ತಾರೆ. ಒಬ್ಬ ಕಮಿಷನ್ ಏಜೆಂಟ್ ಇರುತ್ತಾನೆ, ಪರ್ಚೇಸರ್ ಮತ್ತು ಟ್ರೇಡರ್ ಇರುತ್ತಾರೆ. ಯಾವುದಾದರೂ ಪಾಯಿಂಟ್‌ನ್ನು ನೀವು ಟ್ಯಾಕ್ಸೇಷನ್‌ನಲ್ಲಿ ತರಬೇಕಲ್ಲಾ. ಅದನ್ನು ತಾವು ಕ್ಲಿಯರ್ ಮಾಡಬೇಕು. ದಯಮಾಡಿ, if it attracts more tax, it has to be reviewed. ಯಾವುದು ಟ್ಯಾಕ್ಸ್ ಜಾಸ್ತಿ ಅಗದಂತೆ ಅಮೆಂಡ್‌ಮೆಂಟ್ ಇಟ್ಟಿದ್ದರೆ ನಮ್ಮದೇನೂ ತಕರಾರು ಇರುವುದಿಲ್ಲ. ಷೆಡ್ಯೂಲ್ ಆಫ್ ಐಟ್ಸಂನ್ನು ಚೇಂಜ್ ಮಾಡಿದ್ದೀರಿ. You have brought some items from first and second schedule to third schedule. popular items. ದಿನನಿತ್ಯದ ಉಪಯೋಗಕ್ಕೆ ಬೇಕಾಗಿರುವುದು ಆಹಾರಪದಾರ್ಥಗಳಿಗೆ ಮತ್ತು ರೈತರು ಬಳಸುವುದನ್ನು ಸರ್ಕಾರ ದೊಡ್ಡ ಮನಸ್ಸು ಮಾಡಿ ಷೆಡ್ಯೂಲ್-1ರಲ್ಲಿ ಇಟ್ಟಿತ್ತು. ಅವೆಲ್ಲವುಗಳಿಗೆ ನೀವು Centrifugal pumps, monobloc and ಸಬ್‌ಮರ್ಸಿಬಲ್ ಪಂಪ್ಸ್‌ಗೆ ನೀವು ಟ್ಯಾಕ್ಸ್ ಜಾಸ್ತಿ ಹಾಕುವುದಕ್ಕೆ ಶುರು ಮಾಡುತ್ತೀರಿ. ಷೆಡ್ಯೂಲ್-(3) ಗೆ ಅದು ಬಂದಹಾಗೆ ಟ್ಯಾಕ್ಸ್ ಜಾಸ್ತಿಯಾಯಿತಲ್ಲಾ. ನೀವು ಏನೂ ಹೇಳಲೇಬೇಕಾಗಿಲ್ಲ. Sir, you have said in the Act,

2ನೇ ಷೆಡ್ಯೂಲ್‌ನಲ್ಲಿ ಎಷ್ಟಾಗುತ್ತದೆ, 3ನೇ ಷೆಡ್ಯೂಲ್‌ನಲ್ಲಿ ಎಷ್ಟು ಆಗುತ್ತದೆ, 4ನೇ ಷೆಡ್ಯೂಲ್‌ನಲ್ಲಿ ಎಷ್ಟಾಗುತ್ತದೆ. ಎಂದು ಇಲ್ಲಿಯೇ ಹೇಳಿಬಿಟ್ಟಿದ್ದೀರಿ. You need not say there. ಇಲ್ಲಿ ನೀವು ಷೆಡ್ಯೂಲ್‌ನ್ನು ಚೇಂಜ್ ಮಾಡಿದಾಗ ಆಟೋಮ್ಯಾಟಿಕ್ ಆಗಿ ಟ್ಯಾಕ್ಸ್ ಜಾಸ್ತಿಯಾಗುತ್ತದೆ. ಇದನ್ನು ತಾವು ದಯಮಾಡಿ ರೀಕನ್ಸಿಡರ್ ಮಾಡಬೇಕು. ನೀವು ಷೆಡ್ಯೂಲ್ ಚೇಂಜ್ ಮಾಡಿದಾಗಲೂ ಟ್ಯಾಕ್ಸ್ ಅಷ್ಟೇ ಪರ್ಸೆಂಟ್‌ಗೆ ಉಳಿಸುತ್ತೇವೆಂದರೆ ನಮ್ಮದೇನೂ ತಕರಾರು ಇಲ್ಲ. ಅಲ್ಲಿರುವುದನ್ನು ತೆಗೆದು ಇಲ್ಲಿಗೆ ಹಾಕುತ್ತೇನೆಂದರೆ ಹೇಳುವುದಕ್ಕಾಗುವುದಿಲ್ಲ. By that, you are taxing more. ದಯಮಾಡಿ ತಾವು ಅದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ನೀವು ಟ್ಯಾಕ್ಸ್ ಎಕ್ಸ್‌ಂಫ್ಟ್ ಮಾಡಿದ್ದೀರಿ. ಅದರಲ್ಲಿ ಬರತಕ್ಕಂತಹದ್ದು ಯಾವುದೆಂದರೆ, special boiling spirits and petrol, beer, fenny, liquorur and wine ಅನ್ನು ಒಳಗೊಂಡಂತೆ ಮದ್ಯ, ರೆಕ್ಟಿಫೈಡ್ ಸ್ಪಿರಿಟ್ ಇವುಗಳನ್ನು ಟ್ಯಾಕ್ಸ್‌ನಿಂದ ಎಕ್ಸಂಪ್ಟ್ ಮಾಡಿದ್ದೀರಿ. ಇದನ್ನು ಉಪಯೋಗಿಸುವವರು ಯಾರು? ಪೆಟ್ರೋಲ್ ...

ಶ್ರೀ ಸಿದ್ದರಾಮಯ್ಯ: ವ್ಯಾಟ್‌ನಲ್ಲಿ ಇದರ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಪೆಟ್ರೋಲ್, ಡೀಸಲ್, ಶುಗರ್‌ಕೇನ್ ಇವೆಲ್ಲವನ್ನೂ ಕೂಡ zero ನಲ್ಲಿ ವ್ಯಾಟ್ ಆ್ಯಕ್ಟ್ ಅಮೆಂಡ್‌ಮೆಂಟ್‌ನಲ್ಲಿ ಹಾಕಿರುವುದೆಂದರೆ, ಆಯಾಯ ರಾಜ್ಯಗಳು ತೆರಿಗೆಗಳನ್ನು ಹಾಕುವುದಕ್ಕೆ ಅಧಿಕಾರವಿದೆ. ಹಾಗೆಂದು ಹೇಳಿ ಅದನ್ನು zeroಗೆ ಇಟ್ಟಿದ್ದೇವೆ ಪೆಟ್ರೋಲ್, ಡೀಸೆಲ್ ಈಗ ಅದು zero ನಲ್ಲಿ ಇದೆ. But we are going to levy tax. ಈಗ as it is, ಸ್ಪೆಷಲ್ ಟ್ಯಾಕ್ಸ್ ಹಾಕುತ್ತೇವೆ. ಇದನ್ನು ಎಲ್ಲಾ ರಾಜ್ಯಗಳು ಹಾಕುತ್ತವೆ. ಅದನ್ನು ಚರ್ಚೆ ಮಾಡಿ ಹಾಕೋಣವೆಂದು ಇಟ್ಟಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: 1ನೇ ಷಡ್ಯೂಲ್‌ನಲ್ಲಿ ನೀವು ತಂದಿರುವಂತಹ ಐಟಂಗಳಲ್ಲಿ ಕೈಯಿಂದ ನಡೆಸದಿರುವ, ಪ್ರಾಣಿಗಳಿಂದ ಎಳೆಸದಿರುವ ಕೃಷಿ ಉಪಕರಣಗಳು ಎಂದು ಹೇಳಿದ್ದೀರಿ. ಇಲ್ಲಿ ಕೈಯಿಂದ ನಡೆಸದಿರುವ, ಅಥವಾ ಪ್ರಾಣಿಗಳಿಂದ ಎಳೆಸದಿರುವ ಕೃಷಿ ಉಪಕರಣಗಳು ಎಂದು ಹೇಳಿದ್ದೀರಿ. ಕೃಷಿಯಲ್ಲಿ ರೈತರು ಈಗಲೂ ನಿಮ್ಮ ಲೆಕ್ಕದಲ್ಲಿ ಕೈಯಿಂದ ಮತ್ತು ಪ್ರಾಣಿಗಳಿಂದ ಎಳೆಸಿಕೊಂಡು ಹೋಗುವಂತಹ ಪದ್ಧತಿ ಇದೆ ಎಂದು ತಿಳಿದುಕೊಂಡಿದ್ದೀರಾ? ಸಣ್ಣ ಸಣ್ಣ ರೈತರೂ ಕೂಡ ಇವತ್ತು ಬೇರೆ ಬೇರೆ. . .

ಶ್ರೀ ಸಿದ್ದರಾಮಯ್ಯ: ಎತ್ತು ಗಾಡಿಗಳನ್ನು ಎಲ್ಲರೂ ಮಾರಿಬಿಟ್ಟಿದ್ದಾರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎತ್ತಿನಗಾಡಿ ಎಲ್ಲಿದೆ, ಎತ್ತು ಎಲ್ಲಿದೆ? ಸಾರ್?

ಶ್ರೀ ಸಿದ್ದರಾಮಯ್ಯ: ಚುಂಚನಕಟ್ಟೆಯಲ್ಲಿ ಒಂದು ಜೊತೆ ಎತ್ತಿಗೆ 75 ಸಾವಿರ ರೂಪಾಯಿಗಳು ಆಯಿತು ಇದು ನಿಮಗೆ ಗೊತ್ತೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅದು ಯಾವುದು? ಅದು ಪ್ರದರ್ಶನಕ್ಕೆ ಇಟ್ಟಿದ್ದು.

ಶ್ರೀ ಸಿದ್ದರಾಮಯ್ಯ: ಅಮೃತ್ ಮಹಲ್ ತಳಿಗೆ 75 ಸಾವಿರ ರೂಪಾಯಿಗಳು ನೀವು ಎತ್ತುಗಳನ್ನು ತೆಗೆದುಕೊಂಡಿಲ್ಲ ಎಂದು ಕಾಣಿಸುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನೀವು ಯಾವುದೋ ಒಂದು ಉದಾಹರಣೆಯನ್ನು ಕೊಡಬೇಡಿ. ನೀವು ಒಟ್ಟಾರೆ ಪರಿಸ್ಥಿತಿಯಲ್ಲಿ . . .

ಶ್ರೀ ಸಿದ್ಧರಾಮಯ್ಯ: ನೀವು ವ್ಯವಸಾಯವನ್ನು ಮಾಡುವುದಿಲ್ಲಾವೆ? ಕಡಿಮೆಯಾಗುತ್ತದೆ, ಅದು ಬೇರೆ ವಿಚಾರ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸಾರ್ ನೀವು ಹೇಳಿ, ಅಲ್ಲಾ ಅಲ್ಲಾ drastic ಆಗಿ ರೆಡ್ಯೂಸ್ ಆಗಿದೆ. ಈಗ ನಮ್ಮ ಕಡೆಯೇ ಮೊದಲು . .

ಶ್ರೀ ಸಿದ್ಧರಾಮಯ್ಯ: ಅವರು ಅನುಕೂಲಸ್ಥರಾಗಿರಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕೋಲಾರದಲ್ಲಿ ಅನುಕೂಲಸ್ಥರು ಯಾರೆಂದು ನಿಮಗೆ ಗೊತ್ತಿಲ್ಲವೇ? ಈಗ ಆ ಜಮೀನೆಲ್ಲವೂ ಹೋಯಿತು, ಸುಮಾರು ಜನ ರೈತರು ಎತ್ತುಗಳಿಂದ ಉಳುಮೆ ಮಾಡುವುದು, ಎತ್ತಿನಗಾಡಿಗಳನ್ನು ಹೊಡೆಯುವುದು ಅದು ಕಡಿಮೆಯಾಗಿದೆ. ಎತ್ತುಗಳೇ ಇಲ್ಲದೆ ಬರಗಾಲ ಬಂದು ಅವುಗಳೆಲ್ಲವನ್ನೂ ಸಂತೆಯಲ್ಲಿ ಮಾರಿದ್ದಾರೆ. ಆದರೆ ಎಲ್ಲೋ ಒಂದೊಂದು ಕಡೆ ಅಪರೂಪಕ್ಕೆ ಇಟ್ಟಿದ್ದಾರೆ, ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ ಹಿಂದೆ ಇದ್ದಷ್ಟು ಪ್ರಮಾಣದಲ್ಲಿ ಇವತ್ತು ಎತ್ತು, ಎತ್ತಿನಗಾಡಿ ಅವೆಲ್ಲವನ್ನೂ ಇಟ್ಟುಕೊಂಡಿಲ್ಲ. ಹಾಗಾಗಿ ಬಾಡಿಗೆಗೆ ತೆಗೆದುಕೊಂಡು ಹೋಗಿ ಉಳುಮೆ ಮಾಡಿಸಿ, ಎರಡು ಎಕರೆ ಜಮೀನು ಇರುವವನು ಟ್ರ್ಯಾಕ್ಟರ್ ತೆಗೆದುಕೊಂಡು ಹೋಗಿ ಉಳುಮೆ ಮಾಡಿಸುತ್ತಾನೆ. ಅಥವಾ ಯಾವುದಾದರೂ ಟಿಲ್ಲರ್‌ನಲ್ಲಿ ಅವೆಲ್ಲವನ್ನೂ ಸಾಗಿಸುತ್ತಾನೆ. ಅವನನ್ನು ತಾವು ಶ್ರೀಮಂತ ಎಂದರೆ ಹೇಗೆ? ಟ್ಯಾಕ್ಸ್‌ನ್ನು ವೈಡಸ್ ಮಾಡಬೇಕಾಗಿರುವುದು ನಿಜ, ಅದನ್ನು ತಾವು ಮಾಡಬೇಕು ಅದನ್ನು ನಾವು ಒಪ್ಪುತ್ತೇವೆ. ಟ್ಯಾಕ್ಸ್‌ನ್ನು ವೈಡನ್ ಮಾಡದೇ ಇದ್ದರೆ ಇನ್‌ಕಂ ಜನರೇಟ್ ಆಗುವುದಿಲ್ಲ. ಆದರೆ ವೈಡನ್ ಮಾಡಬೇಕೆಂಬ ಹೆಸರಿನಲ್ಲಿ ಬಡಪಾಯಿಗಳನ್ನು ಅಲ್ಲಿಗೆ ಸೇರಿಸಿ ನೀವು ಇದನ್ನು ಮಾಡುವುದು ಎಷ್ಟು ಮಾತ್ರ ಸರಿ ಎನ್ನುವುದು ನನ್ನ ಪ್ರಶ್ನೆ. ಮತ್ತೆ ಅಗ್ರಿಕಲ್ಚರಲ್ ಪ್ರಾಡಕ್ಟ್ಸ್‌ಗೆ ನಿಮಗೆ ಟ್ಯಾಕ್ಸ್ ಅಧಿಕಾರವನ್ನು ಹಾಕುವ ಬಗ್ಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಅಥವಾ ಅದನ್ನು ನಿಗದಿ ಮಾಡುತ್ತಾರೆ. ಅದನ್ನು ತಾವು ಸ್ವಲ್ಪ ಕಡಿಮೆ ದರದಲ್ಲಿ ಹಾಕಬೇಕಾಗುತ್ತದೆ. ಇಲ್ಲಿ 78ರಲ್ಲಿ ದಂಡಗಳು ಏನು? ಫನಿಶ್‌ಮೆಂಟ್ ಬಗ್ಗೆ ಏನು ಹೇಳಿದ್ದೀರೆಂದರೆ, ಅಧಿಕಾರಿಗಳ ವಿರುದ್ಧ ಅಪರಾಧಗಳು ಎಂಬ ಸೆಕ್ಷನ್‌ನಲ್ಲಿ 5 ಸಾವಿರ ರೂಪಾಯಿಗಳು ದಂಡ ಮತ್ತು 15 ದಿನಗಳಿಗೆ ಕಡಿಮೆ ಇಲ್ಲದೆ ಅವನಿಗೆ ಜೈಲು ಶಿಕ್ಷೆಯಾಗಬೇಕು ಎಂದು ಹೇಳಿದ್ದೀರಿ. ಹೌದು, ಐ.ಪಿ.ಸಿ. ಬೇರೆ, ಟ್ಯಾಕ್ಸ್ ಬೇರೆ ಸ್ವಾಮಿ. ಐ.ಪಿ.ಸಿ.ಕ್ರಿಮಿನಲ್ ಆ್ಯಕ್ಟ್ ಅಲ್ಲವೇ?

ಶ್ರೀ ಸಿದ್ಧರಾಮಯ್ಯ: ಇವೆಲ್ಲವನ್ನೂ ಸೇಲ್ಸ್ ಟ್ಯಾಕ್ಸ್‌ನಲ್ಲಿಟ್ಟು ಅವೆಲ್ಲವೂ ಕೂಡ ಅಫೆನ್ಸ್‌ಗಳು ಇದರಲ್ಲಿ ಮುಂದುವರಿದಿದೆ. ಅಲ್ಲಿ ನಾವು ಏನು ಮಾಡಿದ್ದೇವೋ ಅವೆಲ್ಲವನ್ನೂ ಇದರಲ್ಲಿಯೂ ಕೂಡ ಸೇರಿಸಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸೇರಿಸಿರುವ ಬಗ್ಗೆಯೇ ನಾವು ಹೇಳುತ್ತಿರುವುದು.

ಶ್ರೀ ಸಿದ್ಧರಾಮಯ್ಯ: ಹಿಂದೆ ಇರುವುದು ಸೇರಿಸಬೇಡವೇ? ಹಿಂದೆ ಇರುವುದನ್ನು ಬದಲಾಯಿಸಬೇಕಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಹೌದು, ಏಕೆಂದರೆ, ಟ್ಯಾಕ್ಸ್‌ನನ್ನು ವೈಡನ್ ಮಾಡತಕ್ಕಂತಹ ಸಂದರ್ಭದಲ್ಲಿ ರೈತರಿಗೂ, ಎಂದೂ ಹಾಕುತ್ತಿದ್ದೀರಿ. ರೈತರು ಸ್ವಲ್ಪ ಒರಟಾಗಿ ಗಲಾಟೆ ಮಾಡಿದ ತಕ್ಷಣ ಅವನನ್ನು ಹಿಡಿದುಕೊಂಡು ಹೋಗಿ ಪೊಲೀಸ್‌ನವರು ಕೇಸ್ ಹಾಕಿದರೆ ಅವನಿಗೆ 5 ಸಾವಿರ ರೂಪಾಯಿಗಳ ದಂಡ ಹಾಕಿದರೆ ಏನು ಮಾಡುವುದು? ನಮ್ಮ ಮಾನ್ಯ ಉದಾಸಿಯವರು ಪಿಡಬ್ಲ್ಯೂಡಿ

ಮಿನಿಸ್ಟರ್ ಆಗಿದ್ದಾಗ ಒಂದು ಬಿಲ್‌ನ್ನು ತಂದಿದ್ದರು. ರಸ್ತೆಯಲ್ಲ ಅಡೆತಡೆಯನ್ನು ಮಾಡುವವರಿಗೆ 5 ಸಾವಿರ ರೂ.ಗಳ ದಂಡ ಹಾಕುತ್ತೇವೆಂದು ಮಾಡಿದ್ದರು, ಹಾಗೂ ಜೈಲುವಾಸ ಎಂದು ಮಾಡಿದ್ದರು. ರೈತರು ಯಾರಾದರೂ ಹೋರಾಟ ಮಾಡಿದರೆ, ರಸ್ತೆಯನ್ನು ತಡೆ ಮಾಡಿದರೆ ಅವರಿಗೆ ಜೈಲುವಾಸ ಎಂದರೆ ಹೇಗೆ? ಆ ರೀತಿಯಾಗುವಂತಹ ಸ್ಥಿತಿ ಬರುತ್ತದೆ. ದಯವಿಟ್ಟು ಅಂತಹ ಸ್ಥಿತಿ ಬರುವುದು ಬೇಡ. ನೀವು ಅದನ್ನು ದಯವಿಟ್ಟು ಅಂತಹ ಸ್ಥಿತಿ ಬರುವುದು ಬೇಡ. ನೀವು ಅದನ್ನು ದಯವಿಟ್ಟು ತೆಗೆದರೆ ಒಳ್ಳೆಯದು. ಏಕೆಂದರೆ ಟ್ಯಾಕ್ಸ್‌ನ್ನು ವೈಡನ್ ಮಾಡುವಾಗ ರೈತರು ಅವರು ಮತ್ತು ಇವರೆಲ್ಲರೂ ಸೇರಿಕೊಳ್ಳುತ್ತಾರೆ. ಅದಕ್ಕಾಗಿ ಈ ರೀತಿಯಾದ ಶಿಕ್ಷೆ ಇಡುವುದಕ್ಕೆ ಹೋಗಬೇಡಿ. ಸಿದ್ದರಾಮಯ್ಯನವರೇ, ಇದು ಸರಿಯಲ್ಲ. ಅವರೆಲ್ಲರ ಶಾಪ ನಿಮಗೆ ತಟ್ಟುತ್ತದೆ.

ಶ್ರೀ ವಾಟಾಳ್ ನಾಗರಾಜ್: ಯಾರ ಶಾಪ ತಟ್ಟುತ್ತದೆ? ಅದು ನನಗೆ ಗೊತ್ತಾಗಲಿಲ್ಲ. ಶಾಪ ಎಲ್ಲಿಂದ ಬರುತ್ತದೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲಾ ವಿಚಾರಗಳು ಗೊತ್ತಾಗಬೇಕೆಂದು ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಶಾಪ ಎನ್ನುವ ಬಗ್ಗೆ ಅವರು ಕೇಳಬೇಕು.

ಶ್ರೀ ಸಿದ್ದರಾಮಯ್ಯ: ಪ್ರತಿ ದಿನವೂ ಕೂಡ ವಿರೋಧವನ್ನು ಮಾಡುತ್ತಾರೆ. ಶಾಪದ ಬಗ್ಗೆಯೂ ಕೂಡ ಹೇಳುತ್ತಾರೆ. ಯಾವ ತರಹದ ದ್ವಂದ್ವ ಇದೆ ನೋಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಆಯಿತು ಬಿಡಿ. ಸಿದ್ದರಾಮಯ್ಯನವರೇ, ದಯವಿಟ್ಟು ಅದನ್ನು ಪುನರ್‌ಪರಿಶೀಲನೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ: ರೆಡ್ಡಿಯವರೇ ತಾವು ಇನ್ನೂ ಮುಗಿಸಲಿಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮುಗಿಸಿಲ್ಲ, ಇದನ್ನು ತಾವು ಪುನರ್ ಪರಿಶೀಲನೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ: ಎಲ್ಲರೂ ಒಟ್ಟಿಗೆ ಮಾತನಾಡಿ, ನಾನು ನಂತರ ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಸೆಕ್ಷನ್ 78ನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ.ಜಯಪ್ರಕಾಶ್‌ಹೆಗ್ಡೆ(ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಈಗ ಈ ಐಟಂಗೆ ಏನು 3ನೇ ಅನುಸೂಚಿಯಲ್ಲಿ ಸೇರಿಸಿದ್ದಾರೆ, ಅದರಲ್ಲಿ ಕೆಲವನ್ನು ಕೈಬಿಡಬೇಕಾಗುತ್ತದೆ. ಬಿದಿರು, ಬೈಸಿಕಲ್, ಖಾದ್ಯತೈಲ ಇಂತಹದ್ದು ಹತ್ತಿಬೀಜ, ನೀವು ಬೇರೆ ರಾಜ್ಯದವರಿಗೆ ಇದರ ಬಗ್ಗೆ ಕನ್‌ವಿನ್ಸ್ ಮಾಡಬೇಕು. ಇಲ್ಲವೇ ಇವೆಲ್ಲವನ್ನೂ ಕೈಬಿಡಬೇಕಾಗುತ್ತದೆ. ಎಲ್ಲಾ ರಾಜ್ಯದಲ್ಲೂ on par ಒಂದೇ ತರಹ ಬರಬೇಕೆಂದರೆ ಅವರ ಹತ್ತಿರವೂ ಕೂಡ ಕೈಬಿಡಬೇಕೆಂದು ಹೇಳಬೇಕಾಗುತ್ತದೆ. ಇದನ್ನು ಸೇರಿಸಿಕೊಂಡು ಇಲ್ಲಿ zero ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿರುವುದನ್ನು ಪುನಃ Straight away 4ಕ್ಕೆ ತರುವುದು ಸರಿಯಲ್ಲ. ಎಲ್ಲಿಯಾದರೂ ಟ್ಯಾಕ್ಸ್‌ನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವುದಕ್ಕಾಗುತ್ತದೆಯೇ ಎಂದು ನಾನು ತಮ್ಮ ಹತ್ತಿರ ಕೇಳುತ್ತಿದ್ದೇನೆ. ಇಲ್ಲಿ ತಾವೇನೂ ಮಾಡಿದ್ದೀರಿ? ಇದು ಬಿಲ್ಲಿನಲ್ಲಿ ಬರಲಿಲ್ಲ ನೋಟೀಸ್‌ನ್ನು ಕಳುಹಿಸಿದ್ದೀರಿ, ಪ್ರಾಸ್ಪೆಕ್ಟೀವ್ ಆಗಿ ಕೊಡಿ ತೊಂದರೆ ಇಲ್ಲ. ನಮ್ಮ ಇಂಜಿನಿಯರಿಂಗ್ ಗ್ರಾಜ್ಯುಯೇಟ್ಸ್ ಯಾರಾದರೂ ಸೆಲ್ಫ್ ಎಂಪ್ಲಾಯಿಮೆಂಟ್‌ನಲ್ಲಿ ಇದ್ದರೆ ಇದರ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತೇನೆ. 'IT traders fall into a new taxing trap' ಎಂದು ಇದೆ. ' The high cost state has come out with another tax shocker: this time round the IT traders are at the receiving end. The state government has sent out notices to

the computer hardware traders to pay up taxes on computure parts. These are to be paid with retrospective effect from April 1997 and the collections are estimeate at Rs.200 crore.' ಪ್ರಾಸ್ಪೆಕ್ಟಿವ್ ಆಗಿ ಹಾಕುವುದಕ್ಕೆ ನಾವು ಒಪ್ಪುತ್ತೇವೆ, ತೊಂದರೆ ಇಲ್ಲ. ಈಗ ನಿಮ್ಮದು ಹಳೆಯದಾದರೂ ಸಹ ಒಂದು ನೋಟೀಸ್ ಸಿಕ್ಕಿದೆ. ಅದು ನೋಟೀಸ್ ನೀವು ಕಳುಹಿಸಿದಂಥಾದ್ದೂ. ಹೇಗೆ ರೆಟ್ರಾಸ್ಪೆಕ್ಟೀವ್ ಆಗಿ ಹಾಕುತ್ತೀರಿ ಎಂದು ನಾನು ಕೇಳುತ್ತೇನೆ. ಯಾವುದು ಕಂಪ್ಯೂಟರ್ ಪಾರ್ಟ್ಸ್‌ಇವೆ, ಅದು ಇಂಕ್‌ಜೆಟ್ ಇರಬಹುದು, ಬೇರೆಬೇರೆಯದ್ದಕ್ಕೆ, ಎಲ್ಲಾ ಯುವಕರು ಅವರದ್ದೇ ಆದ ಸಾಫ್ಟ್‌ವೇರ್ ಬಿಸಿನೆಸ್‌ನ್ನು ಮಾಡುತ್ತಾರೆ. ಹಾರ್ಡ್‌ವೇರ್‌ನಲ್ಲಿ ತೊಡಗಿ ಅದನ್ನು ಸೇಲ್ ಮಾಡಿಕೊಂಡಿದ್ದವರಿಗೆ ಪ್ರಾಸ್ಪೆಕ್ಟೀವ್ ಆಗಿ ಹಾಕಿ. ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಸಿದ್ಧರಾಮಯ್ಯ:- ಅದನ್ನು ಅಮೆಂಡ್ ಮಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:- ಅಮೆಂಡ್ ಮಾಡಿದ್ದರೆ ತೊಂದರೆ ಇಲ್ಲ.

ಶ್ರೀ ಸಿ.ಎಂ. ಉದಾಸಿ(ಹಾನಗಲ್):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಿದ್ದುಪಡಿ ತಂದಿರುವಲ್ಲಿ 71ನೇ ಪ್ರಕರಣದಲ್ಲಿ 'ಐದು ಸಾವಿರ ರೂಪಾಯಿಗಳವರೆಗೆ' ಎಂಬ ಪದಕ್ಕೆ ಬದಲಾಗಿ 'ಐದು ಸಾವಿರ ರೂಪಾಯಿಗಳಿಗೆ ಮೀರದ' ಎಂಬ ಪದವನ್ನು ಹಾಕಿದ್ದೀರಿ. ಇದು ಏನಾಗುತ್ತದೆ ಎಂದರೆ 'ನಾಟ್ ಎಕ್ಸೀಡಿಂಗ್' ಎಂದು ಇದ್ದರೆ ಅಡ್ಡಿಯಿಲ್ಲ. ಆದರೆ ಇಲ್ಲಿ 'ಮೀರದ' ಎಂಬ ಶಬ್ದ ಅಷ್ಟೇ ಇದೆ. ಅಂದರೆ ಏನಾಗುತ್ತದೆ? ಅವರಿಗೆ ಡಿಸ್ಕ್ರಿಶನ್ ಕೊಡುವುದು ಬರಬಾರದು ಎಂದು ಇರಬೇಕು. ಈಗ ಐದು ಸಾವಿರ ರೂಪಾಯಿ ಎಂದು ಇಟ್ಟಿದ್ದರೆ, ಅದು 50 ರೂಪಾಯಿಗಳಿಂದ ಐದು ಸಾವಿರ ರೂಪಾಯಿಗಳವರೆಗೆ ಎಂದು ಆದರೆ ಭ್ರಷ್ಟಾಚಾರಕ್ಕೆ ಕಾರಣವಾಗಬಹುದು ಎಂಬುದು ನನ್ನ ಅನುಮಾನ. ಇದನ್ನು ಮತ್ತೊಮ್ಮೆ ತಾವು ಪರೀಶಿಲನೆ ಮಾಡಬೇಕು. 'ಇದು ಏನಾಗುತ್ತದೆ ಎಂದರೆ ಅವನಿಂದ ಸಾವಿರ ರೂಪಾಯಿ ತೆಗೆದುಕೊಂಡು ಐವತ್ತು ರೂಪಾಯಿ ದಂಡಹಾಕಿ ಕೈಬಿಡಬಹುದು ಎನ್ನುವ ಪರಿಸ್ಥಿತಿ ಬರಬಹುದು ಎಂಬ ಅನುಮಾನ ಇರುವುದರಿಂದ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ನಿರ್ದಿಷ್ಟವಾದ ದಂಡವನ್ನು ಗೊತ್ತುಪಡಿಸುವುದು ಸರಿಯಿರಬಹುದೇನೋ ಎಂದು ಮತ್ತೊಮ್ಮೆ ಪರ್ಯಾಲೋಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು):- ಮಾನ್ಯ ಅಧ್ಯಕ್ಷರೆ, ಕೆಲವು ಮಾಹಿತಿಗಳನ್ನು ಹಾಗೂ ಸ್ಪಷ್ಟೀಕರಣಗಳನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಒಂದು ಏನೆಂದು ಹೇಳಿದರೆ ಎಂಪವರ್ ಕಮಿಟಿ ಎಂದು ಸ್ಟೇಟ್ ಫೈನಾನ್ಸ್ ಮಿನಿಸ್ಟ್ರಿ ಕಡೆಯಿಂದ ಆಗಿದೆ. ಆದರೆ ಒಂದು ಸಲ ಈ ವ್ಯಾಟ್ ಕಾರ್ಯಾಚರಣೆಗೆ ಬಂದನಂತರ ಇದಕ್ಕೆ ಏನು ಸ್ಥಾನಮಾನ ಎಂದು ಹೇಳುವಂಥಾದ್ದು ಇಲ್ಲ. ಇದು ರೆಗ್ಯುಲರ್ ಬಾಡಿಯಾಗಿ ಪ್ರತಿಯೊಂದಕ್ಕೂ ಇದೊಂದು ಕೌನ್ಸಿಲ್ ಆಗಿ ಇರಬೇಕು ಎಂದು ಹೇಳುವಂಥ ಇಚ್ಛೆಯಿಂದ ಇದನ್ನು 'ಇಂಟರ್‌ಸ್ಟೇಟ್ ವ್ಯಾಟ್ ಕೌನ್ಸಿಲ್ ಎಂದು ಹೇಳಿಕೊಂಡು ಮಾಡಿ ಪರ್ಮನೆಂಟ್ ಆಗಿ ಮಾನಿಟರಿಂಗ್ ಮಾಡುವುದಕ್ಕೆ ಸಾಧ್ಯವಾಗಬಹುದಾ? ಈ ಒಂದು ನನ್ನ ಅನಿಸಿಕೆಯನ್ನು, ಸಲಹೆಯನ್ನು ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇಲ್ಲದಿದ್ದರೆ ಟ್ಯಾಕ್ಸ್ ಒಂದು ಸಲ ಬಂದನಂತರ 'ಎಂಪವರ್ ಕಮಿಟಿಗೆ' ಏನು ಸ್ಥಾನಮಾನ ಎಂಬುದು ಗೊತ್ತಾಗುವುದಿಲ್ಲ. ಇದು ಒಂದು ಆಗುವಂಥಾದ್ದು ಅವಶ್ಯಕತೆ ಇದೆ ಎಂದು

ಕೂಡ ನಾನು ಹೇಳುತ್ತಿದ್ದೇನೆ. ಮತ್ತೆ ಎರಡನೆಯದು ಏನೆಂದರೆ, ಮಾನ್ಯ ಅಧ್ಯಕ್ಷರೇ, ನಾನು ಕೆಲವು ತಜ್ಞರ ಹತ್ತಿರ ಚರ್ಚೆ ಮಾಡಿದ ಆಧಾರದಲ್ಲಿ ಅದು ಇಂಗ್ಲೀಷಿನಲ್ಲಿ ಇರುವುದರಿಂದ ಅದನ್ನೇ ಉಚ್ಚಾರ ಮಾಡಬೇಕಾಗಿ ಬರಬಹುದು. ಅದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. Wheter there will be Centralised tariff structure across States? ಎಂದು ಹೇಳುವಂಥಾದ್ದು. In order to materialise point raised in item 4.3 of whitepaper i.e., Taxation Information Exchange System to be put in place before abolition of C.S.T for sharing of information among states about comprehensive picture of interstate trade, Centralised Iariff Structure & Codification of commodities in lines of Central Excise is necessary since most commodities ae known by its local names across states. ಈ ಸ್ಥಳೀಯ ಹೆಸರುಗಳಲ್ಲೆ ಅದಕ್ಕೆ ಮನದಟ್ಟು ಮಾಡುವುದು ಅವಶ್ಯಕತೆ ಇದೆ ಎನ್ನುವಂಥಾದ್ದನ್ನೂ ಕೂಡ ನಾನು ಒತ್ತಿ ಹೇಳುತ್ತಿದ್ದೇನೆ. ಮೂರನೇ ಪಾಯಿಂಟ್ Powers to reduce exempt taxes or notifying input tax restricted goods whether under supervision of State Assembly? ಅನೇಕ ಸಂದರ್ಭಗಳಲ್ಲಿ ನಮ್ಮ ಸೋಟಿಫಿಕೇಶನ್‌ಗಳು ಎಷ್ಟು ಇವೆ ಎಂದರೆ ಬಜೆಟ್‌ನದು ಮಾನವನ್ನು ಕಳೆಯುವಷ್ಟು ಇವೆ. ಇವತ್ತು ಡಿಕ್ಲೇರ್ ಮಾಡುತ್ತೇವೆ. ಅದರ ನಂತರ ಬರುವಂತಹ ನೋಟಿಫಿಕೇಶನ್‌ಗಳು ಎಲ್ಲವೂ ಎಕ್ಸಂಪಶನ್ ಕೊಡುವಂಥವು. ಎಲ್ಲಾ ಪಬ್ಲಿಕ್ ಇಂಟರೆಸ್ಟ್ ನಿಂದ ಮಾಡುತ್ತಿದ್ದೇವೆ ಎಂದು ಹೇಳುವಂಥ ನೂರಾರು ನೋಟಿಫಿಕೇಶನ್‌ಗಳನ್ನು ನಾವು ಮಾಡುತ್ತಿದ್ದೇವೆ. ಅಂಥಾದ್ದೂ ಕೂಡ ಇನ್ನು ಮುಂದೆ ಬರಲಿಕ್ಕೆ ಸಾಧ್ಯತೆಯಿದೆ ಎಂದು ಹೇಳುವಂಥಾದ್ದೂ ಕೂಡ ಬರುತ್ತದೆ. If this process is not supervised by Empowered Committee or Assembly, there are every chances of misuse of this power as can be seen from the volume of notification issued under Section 8-A of KST Act, 1957 throughout the year extending concessions of tax in some or other form. ಎಂದು ಹೇಳುವಂಥಾದ್ದು. ನಾಲ್ಕನೇ ಪಾಯಿಂಟ್ Whether there will be parallel taxation like special Entry Tax? ಇದರಲ್ಲಿ ಆಕ್ಟ್ರಾಯ್ ಹಾಕುವಂಥದ್ದರೆ ಬಗ್ಗೆ ಏನೋ ಒಂದು ಸುಳಿವನ್ನು ಇಟ್ಟಿದ್ದಾರೆ. ಎಂಟ್ರಿಟ್ಯಾಕ್ಸ್ ಹಾಕುವುದಕ್ಕೆ ಏನಾದರೂ ಅವಕಾಶ ಇದೆಯಾ? ಅದಕ್ಕೆ ಅವಕಾಶ ಆಗದ ರೀತಿಯಲ್ಲಿ ಆಕ್ಟ್ರಾಯ್ ಆಗಲಿ, ಎಂಟ್ರಿಟ್ಯಾಕ್ಸ್ ಆಗಲಿ ಒಮ್ಮೆ ಅದು ಬಂದನಂತರ ಯೂನಿಫಾರಂ ಆಗಿ ಎಲ್ಲಾ ರಾಜ್ಯಗಳಿಗೂ ಸಮಾನವಾಗಿ ಅನ್ವಯವಾಗಬೇಕು. ಇದು ಬರಬಾರದು ಎಂಬುದು ನಮ್ಮ ಇಚ್ಛೆ ಇದೆ. ಆದರೆ ಇದರಲ್ಲಿ ಏನೋ ಒಂದು ಸಂಶಯ ಬರುತ್ತಿದೆ. ಆಕ್ಟ್ರಾಯ್‌ಗೆ ಏನಾದರೂ ಅವಕಾಶ ಇದೆಯಾ? ಎಂಟ್ರಿಟ್ಯಾಕ್ಸ್‌ಗೆ ಏನಾದರೂ ಅವಕಾಶ ಇದೆಯಾ? ಇದನ್ನು ಕ್ಲಾರಿಫೈ ಮಾಡಬೇಕು. ನಂತರ– Wheter State is expecting legal hurdles like ... ಇದರಲ್ಲಿ ವಿಶೇಷವಾಗಿ ಬರುವಂಥಾದ್ದು ಎಂದರೆ ಕೆಲವು ಇಂಡಸ್ಟ್ರಿಗಳಿಗೆ ಈಗಾಗಲೇ ಕನ್ಸೆಶನ್‌ಗಳನ್ನು ಕೊಟ್ಟಿದ್ದಾರೆ. ಇಷ್ಟು ವರ್ಷಗಳ ತನಕ ಟ್ಯಾಕ್ಸ್ ಎಕ್ಸಂಪಶನ್ ಎಂದು ಹೇಳಿ ಹಾಗೆ ಕೊಡಲಾಗಿದೆ. ಈ ವ್ಯಾಟ್ ಆ್ಯಕ್ಟ್‌ನಲ್ಲಿ ಅಂತಹವರಿಗೆ ಯಾವ ರೀತಿ ನಾವು ಕಾಂಪನ್‌ಸೇಟ್ ಮಾಡುತ್ತೇವೆ ಎನ್ನುವಂಥಾದ್ದು. ಹತ್ತು ವರ್ಷಗಳ ತನಕ ಟ್ಯಾಕ್ಸ್ ಎಕ್ಸಶಷನ್ ಎಂದು ಇದೆ. ಇದನ್ನು ತಾವು ಕ್ಲಾರಿಫೈ ಮಾಡಬೇಕು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು):– 2002ನೇ ಇಸವಿಯಿಂದ ಈಚೆಗೆ ಇಂಡಸ್ಟ್ರೀಗಳಿಗೆ ಯಾವುದೇ ತೆರಿಗೆ ವಿನಾಯ್ತಿಯನ್ನು ಕೊಡುತ್ತಿಲ್ಲ. ಹೊಸ ಇಂಡಸ್ಟ್ರೀಯಲ್ ಪಾಲಿಸಿಯನ್ನು ಮಾಡಿದಮೇಲೆ ಇದು ಇಲ್ಲ. ಅದಕ್ಕಿಂತ ಹಿಂದೆ ಕೊಟ್ಟಿದ್ದರು. ಡೆಫರ್‌ಮೆಂಟ್, ಮತ್ತು ಟ್ಯಾಕ್ಸ್ ಎಕ್ಸಂಶನ್ ಎಲ್ಲಾ ಕೊಟ್ಟಿದ್ದೇವೆ. ಈಗ ಇಲ್ಲ. ಯಾವ್ಯಾವುದು ಇನ್ನೂ ಟ್ಯಾಕ್ಸ್ ಎಕ್ಸಂಪಶನ್ ಇದೆ, ಅವು ಮುಂದುವರೆಯುತ್ತವೆ. ಡಫರೆನ್ಸ್ ಕೂಡ ಮುಂದುವರೆಯುತ್ತದೆ.

ಶ್ರೀ ಎಸ್. ಯೋಗೀಶ್ ಭಟ್:– ಇನ್ನೊಂದು ಇದರ ಬಗ್ಗೆ ತಯಾರಿ ಮಾಡುವ ದೃಷ್ಟಿಯಿಂದ ಚೇಂಬರ್ ಆಫ್ ಕಾಮರ್ಸ್ ಇರಬಹುದು, ಬೇರೆಬೇರೆ ದೃಷ್ಟಿಯಿಂದ ವ್ಯಾಪಾರ ಮಂಡಳಿಗಳು ಇರಬಹುದು, ಎಲ್ಲಾ ಕಡೆಗಳಲ್ಲಿ ಸೆಮಿನಾರ್‌ಗಳನ್ನು ಮಾಡಿ ಅವರನ್ನು ತಯಾರು ಮಾಡುವಂಥಾದ್ದು ಆಗಬೇಕು. ಇದು ಏಪ್ರಿಲ್ 1ರಿಂದ ಪ್ರಾರಂಭವಾಗುವುದರಿಂದ ಅದಕ್ಕಿಂತ ಮುಂಚಿತವಾಗಿ ತಯಾರಿಕೆಗೆ ತಮ್ಮ ಕಡೆಯಿಂದ ಏನು ಹೆಜ್ಜೆಗಳನ್ನು ಇಟ್ಟುಕೊಂಡಿದ್ದೀರಿ? ಇದರ ಬಗ್ಗೆ ಸೆಮಿನಾರ್‌ಗಳ ಮೂಲಕ ಪೂರ್ತಿ ಮಾಹಿತಿಗಳನ್ನು ಕೊಡುವಂತಹ ಕಾರ್ಯಕ್ರಮಗಳನ್ನು ತಾವು ಹಾಕಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಅಂದರೆ ವಿಶೇಷವಾಗಿ ಕಾಂಟ್ರಾಕ್ಟ್ ಮ್ಯಾನ್ಯುಫ್ಯಾಕ್ಚರಿಂಗ್ ಇದೆ. ಇದರಲ್ಲಿ ಅನೇಕ ಕಂಪನಿಗಳು ಏನು ಮಾಡುತ್ತವೆ ಎಂದರೆ ಲೋಕಲ್ ಕಡೆಯಲ್ಲಿ ಮ್ಯಾನ್ಯುಫ್ಯಾಕ್ಚರಿಂಗ್ ಮಾಡಿಸಿ ಅದನ್ನು ಬೇರೆ ಕಡೆಗೆ ಸರಬರಾಜು ಮಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಲೋಕಲ್ ಆಗಿ ಅದನ್ನು ಮ್ಯಾನ್ಯುಫ್ಯಾಕ್ಚರ್ ಮಾಡಿಕೊಂಡು ಒಂದು ಪ್ರಾಡಕ್ಟ್‌ಗೆ ಅದರ ಮೇಲೆ ಟ್ಯಾಕ್ಸ್ ಬಿತ್ತು ಎಂದು ಹೇಳಿದರೆ ಇನ್ನೊಂದು ಕಡೆಗೆ ಇನ್ನೊಂದು ರಾಜ್ಯಕ್ಕೆ ಕಳುಹಿಸಿದರೆ, ಅಂತಹ ಸಂದರ್ಭದಲ್ಲಿ ಅದನ್ನು ರಿಕವರಿ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೆ ಅವರು ಸಹಜವಾಗಿ ವಿಚಾರ ಮಾಡುತ್ತಾರೆ. ಸ್ಥಳೀಯವಾಗಿ ಇದು ಹೋಗುವ ಸಾಧ್ಯತೆ ಇದೆ. ಅವರು ನಮ್ಮ ರಾಜ್ಯಕ್ಕೆ ಏಕೆ ಕೊಡಬೇಕು ಎಂದು ಅಲ್ಲಿಯ ರಾಜ್ಯಗಳಿಗೆ ಕೊಡುವ ಸಾಧ್ಯತೆ ಇರುವುದರಿಂದ ಈ ಅವಕಾಶವನ್ನು ಕಳೆದು ಕೊಳ್ಳುವಂಥಾದ್ದನ್ನು ತಪ್ಪಿಸುವುದು ಹೇಗೆ? ಯಾವ ರೀತಿ ಇದರ ಬಗ್ಗೆ ಯೋಚನೆ ಮಾಡಬಹುದು? ಇದೇ ರೀತಿ–Time frame fixed for refunds to dealers whether too long? ಎಂದು ಹೇಳುವಂಥಾದ್ದು. ಸನ್ಮಾನ್ಯ ಅಧ್ಯಕ್ಷರೆ, ಈ ಪಾಯಿಂಟ್‌ನ್ನು ಸ್ವಲ್ಪ ಮಾನ್ಯ ಸಚಿವರು ಗಮನಿಸಬೇಕು. As per draft VAT Rule 129(2), fro dealers other than exporters, refund for a particular financial year will be within 35 days after the end of last month of second year for which return is furnished, For example, if refund, is due for year 1st ಏಪ್ರಿಲ್ 2005ಕ್ಕೆ ಡ್ಯೂ ಇದ್ದರೆ ಅದನ್ನು ಕೊಡುವುದು ಯಾವಾಗ ಎಂದು ಹೇಳಿದರೆ 5ನೇ ಮೇ 2007ಕ್ಕೆ. ಸುಮಾರು 25 ತಿಂಗಳ ನಂತರ ಅವರಿಗೆ ರಿಫಂಡ್ ಸಿಗುವಂಥಾದ್ದು. ಇದು ಖಂಡಿತವಾಗಿಯೂ ಸರಿಯಲ್ಲ. ಅದರ ಮೇಲೆ ವಿಳಂಬವಾದರೆ ಇಂಟರೆಸ್ಟ್ ಕಾಂಪೊನೆಂಟ್ ನಾವು ಕೊಡುತ್ತೇವಾ? ಇದನ್ನು ಕಡಿತಗೊಳಿಸಲಿಕ್ಕೆ ನಮಗೆ ಸಾಧ್ಯವಿಲ್ಲವೆ? ಇದು ಕನಿಷ್ಟ ಐದಾರು ತಿಂಗಳಲ್ಲಿ ರಿಫಂಡ್ ಆಗುವಂತಾದ್ದು ಆಗಬೇಕು. ಈಗಿನ ಪ್ರೊಸೀಜರ್‌ನಲ್ಲಿ ಇದನ್ನು ಸ್ವಲ್ಪ ಸಿಂಪ್ಲಿಫೈ ಮಾಡಿ ಕನಿಷ್ಟ ಐದಾರು ತಿಂಗಳಲ್ಲಿ ಅಥವಾ ಮುಂದಿನ ಅಕಾಡೆಮಿಕ್ ವರ್ಷದ ಕೊನೆಯೊಳಗೆ ಸಿಗುವಂತೆ ಕನ್ಸಿಡರ್ ಮಾಡುವುದಕ್ಕೆ ಸಾಧ್ಯವಿಲ್ಲವೇ. ಈ ಮಂತ್‌ವೈಸ್ ಒಂದೊಂದು ತಿಂಗಳಲ್ಲಿ ಕೂಡ ಅದಕ್ಕೆ ಸಂಬಂಧಪಟ್ಟಂತೆ ರಿಫಂಡ್

ಮಾಡಿಕೊಂಡು ಸ್ಟಿಪ್ಯುಲೇಟಡ್ ಟೈಮ್ ಎಂದು ಮಾಡಿ ಮೂರು–ಐದು ತಿಂಗಳು ಎಂದು ನಿಶ್ಚಿತಗೊಳಿಸಿ ಆ ರೀತಿ ರಿಫಂಡ್ ಮಾಡುವಂಥ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಈಗಿನ ಆ್ಯಕ್ಟ್ ಪ್ರಕಾರ ವ್ಯಾಪಾರಿಗಳಿಗೆ 25 ತಿಂಗಳು ಆಗುವುದರಿಂದ ಇದು ಖಂಡಿತವಾಗಿಯೂ ನಷ್ಟಕ್ಕೆ ಕಾರಣವಾಗುತ್ತದೆ ಎಂಬುದನ್ನೂ ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಂತರ–Complexities in Transitional provisions from KST Act to VAT Law whether properly addressed? ಎಂದು ಹೇಳುವಂಥಾದ್ದನ್ನು ಅವರು ಉಲ್ಲೇಖ ಮಾಡುತ್ತಿದ್ದಾರೆ. Transition provisions relating to capital goods ಆದರೆ ಇಲ್ಲಿ 31–3–2005ಕ್ಕೆ ಯಾವ ಒಂದು ಸ್ಟಾಕ್ ಇದೆ, ಅದು ಮೆಶಿನರಿ ಇರಬಹುದು, ವಹಿಕಲ್ಸ್ ಇರಬಹುದು, ಇಂತಹ ಸಂದರ್ಭದಲ್ಲಿ ಅವರಿಗೆ ಅದನ್ನು ಮಾರಾಟ ಮಾಡಬೇಕು ಎಂದು ಇದ್ದರೆ ಯಾವರೀತಿಯಲ್ಲಿ ತಾವು ರಿಯಾಯ್ತಿಗಳನ್ನು ಕೊಡುತ್ತೀರಿ? 31ರ ಮಾರ್ಚ್ ತನಕ ಎಷ್ಟು ಗೂಡ್ಸ್ ಇಟ್ಟು ಕೊಂಡಿದ್ದಾರೆ ಮತ್ತು ಅದರ ಮೇಲೆ ಟ್ಯಾಕ್ಸೇಶನ್ ಇರುತ್ತದೆ. ಈಗ ವೆಹಿಕಲ್ಸ್ ಇರಬಹುದು, ಮೋಟಾರ್ ವೆಹಿಕಲ್ಸ್ ಇರಬಹುದು, ಮೆಶಿನರಿ ಇರಬಹುದು ನಾಳೆ ಅದನ್ನು ಅವರು ಮಾರಾಟ ಮಾಡಬೇಕೆಂದು ಇದ್ದಾರೆ. ಐದಾರು ತಿಂಗಳ ನಂತರ, ಒಂದು ವರ್ಷದ ನಂತರ ಮಾರಾಟ ಮಾಡಬೇಕು. ಅಂತಹ ಸಂದರ್ಭದಲ್ಲಿ ಟ್ಯಾಕ್ಸ್ ಅಲ್ಲಿ ಸಫರ್ ಆಗಿರುತ್ತದೆ. ಅಂತಹ ಸನ್ನಿವೇಶದಲ್ಲಿ ಮಾರಾಟ ಮಾಡುವ ಸಂದರ್ಭದಲ್ಲಿ ತಾವು ಹೇಗೆ ರಿಯಾಯ್ತಿಯನ್ನು ಕೊಡುತ್ತೀರಿ? ಯಾವರೀತಿ ಅನುಕೂಲ ಮಾಡಿಕೊಡುತ್ತೀರಿ ಎಂಬುದನ್ನು ಹೇಳಬೇಕು. ಇದನ್ನು ದಯವಿಟ್ಟು ಕ್ಲಾರಿಫೈ ಮಾಡಬೇಕು. ಅಂದರೆ ಇದರಲ್ಲಿ ಎರಡು ವರ್ಷದಲ್ಲಿ ಸಿ.ಎಸ್.ಟಿ. ಅಬಾಲಿಶ್ ಆಗುತ್ತದೆ ಎಂದು ಹೇಳುವಂಥ ರೀತಿಯಲ್ಲಿ ಇದೆ. ಆ ನಿಟ್ಟಿನಲ್ಲಿ ಯಾವರೀತಿ ಅದಕ್ಕೆ ಸಂಬಂಧಪಟ್ಟಂತೆ ಯಾವ ಕಮಾಡಿಟಿ ಮತ್ತು ಹೇಗೆ ಅದು ಆಗುತ್ತದೆ ಎನ್ನುವುದರ ಬಗ್ಗೆ ಮತ್ತು ಅದಕ್ಕೆ ತಮ್ಮ ಕಡೆಯಿಂದ ಏನು ತಯಾರಿ ಇದೆ? ಹಂತಹಂತವಾಗಿ ಇದು ಆಗುತ್ತದೆಯೆ? ಆಗುವುದಿದ್ದರೆ ಹೇಗೆ? ಇದರ ಬಗ್ಗೆ ಒಂದು ಸ್ಪಷ್ಟೀಕರಣ ಬೇಕು. ಮತ್ತೆ ವಿಶೇಷವಾಗಿ ತಾವು ಹೇಳಿದಂತೆ 1800 ಕೋಟಿ ರೂ.ನಷ್ಟ ಆಗುವಂಥಾದ್ದರ ಬಗ್ಗೆ ಯಾವ್ಯಾವ ಆಧಾರದಲ್ಲಿ ತಾವು ಇದನ್ನು ಹೇಗೆ ಲೆಕ್ಕಾಚಾರ ಮಾಡಿದ್ದೀರಿ? ನಮಗೆ ಎಷ್ಟು ನಷ್ಟವಾಗುತ್ತದೆ ಕೇಂದ್ರಸರ್ಕಾರ ಅದನ್ನು ಭರಿಸುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಯಾವ ಆಧಾರದಮೇಲೆ ಯಾವ ಲೆಕ್ಕಾಚಾರದಲ್ಲಿ ನಮಗೆ ಇಷ್ಟು ನಷ್ಟವಾಗುತ್ತದೆ ಎಂದು ನಿಖರವಾದ ಅಂಕಿಅಂಶಕ್ಕೆ ತಾವು ಬಂದಿದ್ದೀರಿ? ಈ ವಿವರವನ್ನು ನಾನು ತಮ್ಮ ಕಡೆಯಿಂದ ಕೇಳುತ್ತಿದ್ದೇನೆ. ಎರಡನೆಯದಾಗಿ ಚೆಕ್‌ಪೋಸ್ಟ್‌ಗಳ ಬಗ್ಗೆ ತಾವು ಉಲ್ಲೇಖ ಮಾಡಿದ್ದೀರಿ. ಚೆಕ್‌ಪೋಸ್ಟ್‌ಗಳ ಆಧುನೀಕರಣದ ಅನಿವಾರ್ಯತೆ ಬಹಳ ಇದೆ. ಇಲ್ಲಿ ಯಾವರೀತಿ ಕಳ್ಳತನ ಆಗುವಂಥಾದ್ದು ಎಂದು ಹೇಳಿದರೆ ಇದರಲ್ಲಿ ಕೇವಲ ವ್ಯಾಪಾರಿಗಳು ಮಾತ್ರವಲ್ಲ, ವ್ಯಾಪಾರಿಗಳು ಪ್ರಾಮಾಣಿಕವಾಗಿ ಮಾರಾಟ ಮಾಡುತ್ತಾ ಇದ್ದರೂ ಕೂಡ ನೀನು ಏನು ಬೇಕಾದರೂ ಮಾಡಿಕೋ, ನನಗೆ ತಿಂಗಳಿಗೆ ಇಷ್ಟು ಸಾವಿರ ರೂ.ಗಳನ್ನು ಕೊಡು ಎಂದು ಹೇಳತಕ್ಕಂಥ ಅಧಿಕಾರಿಗಳು ಇರುತ್ತಾರೆ.

ಶ್ರೀ ಸಿದ್ದರಾಮಯ್ಯ:– ನೀವು ಅಂಥ ಅಧಿಕಾರಿಗಳ ಹೆಸರನ್ನು ಕೊಡಿ. ನಾವು ಮುಲಾಜಿಲ್ಲದೆ ಅವರನ್ನು ಮನೆಗೆ ಕಳುಹಿಸುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ:– ನೀವು ಅವರನ್ನೆಲ್ಲಾ ಮನೆಗೆ ಕಳುಹಿಸಿದರೆ ನಿಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟು ಜನ ಉಳಿಯುತ್ತಾರೆ?

ಶ್ರೀ ಸಿದ್ದರಾಮಯ್ಯ:– ಆಗ ನಿಮಗೂ ಮಾತನಾಡುವುದು ಕಡಿಮೆಯಾಗುತ್ತದಲ್ಲಾ.

ಶ್ರೀ ಅರಗ ಜ್ಞಾನೇಂದ್ರ:– ಅಲ್ಲ, ಡಿಪಾರ್ಟ್‌ಮೆಂಟೇ ಖಾಲಿಯಾಗಿಬಿಡುತ್ತದಲ್ಲಾ. ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಒಂದು ಅಸೆಸ್‌ಮೆಂಟ್‌ಗೆ ಹೋದರೆ ಎಷ್ಟು ಕಷ್ಟವಾಗುತ್ತದೆ ಎಂದು.

ಶ್ರೀ ಸಿದ್ದರಾಮಯ್ಯ:– ಈ ದೇಶದಲ್ಲಿ ಎಲ್ಲರೂ ಕಳ್ಳರೇ ಎಂದು ಹೇಳುವುದಕ್ಕಾಗುವುದಿಲ್ಲ. ಕಳ್ಳರು ಇದ್ದಾರೆ, ಒಳ್ಳೆಯ ಜನ ಇದ್ದಾರೆ. ಇಡೀ ವ್ಯವಸ್ಥೆಯೇ ಆ ರೀತಿ ಆಗಿಬಿಟ್ಟಿದೆ. ಯಾರನ್ನು ಕೇಳುವುದು, ಯಾರನ್ನು ಬಿಡುವುದು. ಈ ಬಗ್ಗೆ ಚರ್ಚೆ ಇನ್ನೊಂದು ದಿನ ಮಾಡೋಣ.

ಶ್ರೀ ಎನ್.ಯೋಗೀಶ್ ಭಟ್:– ಸನ್ಮಾನ್ಯ ಅಧ್ಯಕ್ಷರೇ, ಅವರು ಕೇಳಿದ್ದಕ್ಕೆ ಒಂದು ಉತ್ತರ ಕೊಡುತ್ತೇನೆ. ಶ್ರೀ ಮಧುರವರು ಕಮಿಷನರ್ ಇದ್ದಾಗ, ಅದರಲ್ಲಿ ನೇರವಾಗಿ ಇಂತಹ ಒಬ್ಬ ಜಾಯಿಂಟ್ ಕಮಿಷನರ್, ಎಷು ಕರಪ್ಟ್ ಆಗಿ, ಈ ರೀತಿ ರಾಜ್ಯಕ್ಕೆ ಬರುವಂಥ ತೆರಿಗೆಯನ್ನು ಲೂಟಿ ಮಾಡುತ್ತಿದ್ದಾರೆನ್ನುವುದನ್ನು ಹೇಳಿದಾಗ, ಅವರು ಅದನ್ನು ಪರಿಶೀಲನೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಂಡರು. ನಮಗೆ ಆಶ್ಚರ್ಯವಾಗುತ್ತದೆ. ಕೇವಲ 3–4 ದಿವಸಗಳಲ್ಲಿ ಮಂಗಳೂರಿಗೆ ವಾಪಸ್ ಬಂದರು. ಇಂತಹ ಒಂದು ಹಿನ್ನೆಲೆ ಇರುವಾಗ, ಒಬ್ಬ ಪ್ರಮುಖ ಕಮಿಷನರ್ ಆಗಲಿ, ಅಧಿಕಾರಿಯಾಗಲಿ ಹೇಗೆ ಕೆಲಸ ಮಾಡಬೇಕು. ಕೊನೆಗೆ ಅವರಿಗೆ ಫೋನ್ ಮಾಡಿದಾಗ ಅಸಹಾಯಕತನ ಹೇಳಿದರು. ಇದರಲ್ಲಿ ಸಾರಿಗೆ ವಿಭಾಗದಲ್ಲಿ ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಚೆಕ್‌ಪೋಸ್ಟ್ ಮಟ್ಟದಲ್ಲಿ ಮಾಡರ್ನೈಸ್ ಮಾಡುವ ದೃಷ್ಟಿಯಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಮತ್ತ ಅಧಿಕಾರಿ ಮಟ್ಟದಲ್ಲಿ ತಾವು ಹೇಳಿದಿರಿ. ನನ್ನ ಸಲಹೆ ಏನೆಂದರೆ, ಕೇರಳದಿಂದ ಒಂದು ಲಾರಿ ಹೋಗುತ್ತದೆ. ಅದು ಕರ್ನಾಟಕದಿಂದ ಮಹಾರಾಷ್ಟ್ರ, ಗುಜರಾತ್‌ಗೆ ಹೋಗುತ್ತದೆ. ಅನೇಕ ಸಂದರ್ಭಸಲ್ಲಿ ಏನು ಮಾಡುತ್ತಾರೆ? ಕೇರಳದಿಂದ ಕರ್ನಾಟಕಕ್ಕೆ ಬಂದು, ಮಹಾರಾಷ್ಟ್ರಕ್ಕೆ ಹೋಗುವ ದಾರಿಯಲ್ಲಿ ಚೆಕ್‌ಪೋಸ್ಟ್‌ಗಳಲ್ಲಿ ಬಿಲ್‌ಗಳನ್ನು ಕೊಡುತ್ತಾರೆ. ಆದರೆ, ಅನ್‌ಲೋಡ್ ಆಗುವಂಥಾದ್ದು ಕರ್ನಾಟಕದಲ್ಲಿ. ಅಂತಹ ಸಂದರ್ಭದಲ್ಲಿ ಗುಜರಾತೂ ತಲುಪುವುದಿಲ್ಲ, ಎಲ್ಲೂ ತಲುಪುವುದಿಲ್ಲ, ಈ ರೀತಿ ಇರುವಂಥ ಕೆಲವು ವ್ಯವಸ್ಥೆಗಳೂ ನಡೆಯುತ್ತಾ ಇರುವುದರಿಂದ, ಕನಿಷ್ಟ ತಾವು ಹೇಳುವಂತಾದ್ದು ಈ ವ್ಯಾಟನ್ನು ಇಂಟ್ರಡ್ಯೂಸ್ ಮಾಡುವಂಥ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಒಂದು ರಿಜಿಸ್ಟ್ರೇಷನ್ ನಂಬರ್ ಕೊಡುತ್ತಾ ಇದ್ದೀರಿ. ಅದರ ಜೊತೆಗೆ ಇ–ಮೇಲ್ ಐಡಿ ಎಂದು ಮಾಡಿ destination ಒಂದು ಪಾಯಿಂಟ್‌ನಿಂದ ಇನ್ನೊಂದು ಪಾಯಿಂಟ್‌ಗೆ ಎಲ್ಲಿ ಹೋಗುತ್ತದೆ ಎಂದು ಹೇಳುವಂಥಾದ್ದು. ಇಲ್ಲಿ ಕೇರಳದಿಂದ ಗುಜರಾತ್‌ಗೆ ಹೋಗುತ್ತದೆಂದರೆ ಸರಿಯಾಗಿ ಗುಜರಾತ್ ಮುಟ್ಟಿದೆಯೇ ಇಲ್ಲವೇ ಎಂದು ಹೇಳುವಂಥಾದ್ದು. ಇಬ್ಬರು KST ಹೆಸರಲ್ಲಿ ಇನ್ನೊಬ್ಬರು ವ್ಯಾಪಾರ ಮಾಡುವಂಥಾದ್ದು ನಡೆಯುತ್ತಾ ಇರುತ್ತದೆ. ಅಂತಹ ಸಂದರ್ಭದಲ್ಲಿ ಇ–ಮೇಲ್ ಐಡಿನಲ್ಲಿ ಯಾರಾದರೂ ದುರುಪಯೋಗ ಮಾಡಿದರೆ ತಕ್ಷಣ ಅದನ್ನು ಗ್ರಹಿಸುವುದಕ್ಕೆ ಸಾಧ್ಯವಾಗುತ್ತದೆ. ವಿಶೇಷವಾಗಿ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿದಲ್ಲಿ ದಾರಿಯಲ್ಲಿ ನಿಲ್ಲಿಸಿ ಚೆಕ್ ಮಾಡುವುದರ ಬದಲು ಇಂತಹ ವ್ಯವಸ್ಥೆಗಳ ಮೂಲಕ ಎಲ್ಲಾ ಮೂವ್‌ಮೆಂಟ್‌ಗಳನ್ನು ಒಬ್ಬ ಅಧಿಕಾರಿ ಇಲ್ಲಿ ಕುಳಿತುಕೊಂಡೇ ಇಂಟರ್‌ನೆಟ್ ಜಾಲದ ಮೂಲಕ ಎಲ್ಲೆಲ್ಲಿ ಹೋಗುತ್ತಾ ಇದೆ, ಯಾವ ಲಾರಿ ಎಲ್ಲಿ ಹಲ್ಟ್ ಆಗಿದೆ ಎನ್ನುವುದನ್ನು ನೋಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ತಾವು ಅನುಷ್ಠಾನ ಮಾಡಬೇಕು. ವಿಶೇಷ ಆರ್ಥಿಕ ವಲಯದಲ್ಲಿ ರಫ್ತು ಘಟಕಕ್ಕೆ ಮಾತ್ರ ತಾವು ಎಕ್ಸಂಪ್‌ಷನ್ ಕೊಡುತ್ತೀರಿ. ಇನ್ನಿತರ ಪ್ರದೇಶಗಳಲ್ಲಿರತಕ್ಕ

ರಘಟ್ಟ ಘಟಕಕ್ಕೂ ವಿನಾಯಿತಿ ಕೊಡುತ್ತೀರಾ ಎನ್ನುವುದನ್ನು ಕ್ಲಾರಿಫೈ ಮಾಡಬೇಕು. ನಂತರ, ಪುಟ–20ರಲ್ಲಿ ತಪ್ಪುಗಳನ್ನು ಸರಿಪಡಿಸುವಿಕೆಗೆ 5 ವರ್ಷಗಳು ಎಂದು ಇದರಲ್ಲಿ ಕೊಟ್ಟಿದ್ದಾರೆ. ತಪ್ಪುಗಳನ್ನು ಸರಿಪಡಿಸಲು 5 ವರ್ಷಗಳು ಬೇಕೇ? ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು. ಇದನ್ನು ಕಡಿಮೆ ಅವಧಿಯಲ್ಲಿ ಮಾಡುವುದಕ್ಕಾಗುವುದಿಲ್ಲವೇ ಎನ್ನುವುದನ್ನು ಹೇಳಬೇಕು. ನಂತರ, ಪೇಜ್ 22ರಲ್ಲಿ ಸೆಕ್ಷನ್ 78ಕ್ಕೆ ಸಂಬಂಧಪಟ್ಟಂತೆ, ಅಧಿಕಾರಿಗಳ ವಿರುದ್ಧ ಅಪರಾಧಗಳು ಎಂದು. ಅಧಿಕಾರಿಗಳ ವಿರುದ್ಧ ವ್ಯಾಪಾರಿಗಳು ಸಹಕರಿಸದಿದ್ದರೆ ಇದ್ದ ದಂಡನೆಗಳೆಲ್ಲಾ ತಾವು ಡಿಲೀಟ್ ಮಾಡಿದ್ದೀರಿ. ಆದರೆ, ಅಧಿಕಾರಿಗಳು ತಪ್ಪಿದರೆ ಅಕೌಂಟಬಿಲಿಟಿ ಮತ್ತು ರೆಸ್ಪಾನ್ಸಿಬಲಿಟಿ ಫಿಕ್ಸ್ ಮಾಡುವ ದೃಷ್ಟಿಯಿಂದ ಅವರಿಗೇನು ದಂಡನೆ ಮಾಡುತ್ತೀರಿ? ಅಂತಹ ಯಾವ ಸಂಗತಿಗಳೂ ಇದರಲ್ಲಿ ಉಲ್ಲೇಖ ಆಗಿರುವುದಿಲ್ಲ. ಇದರ ಬಗ್ಗೆ ತಾವು ಕ್ಲಾರಿಫಿಕೇಷನ್ ಕೊಡಬೇಕೆನ್ನುವಂಥಾದ್ದನ್ನು ಕೇಳಿ, ನನಗೆ ಅವಕಾಶ ಕೊಟ್ಟಿದ್ದಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಸಿದ್ಧರಾಮಯ್ಯ(ಉಪ ಮುಖ್ಯಮಂತ್ರಿಗಳು):–** ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರು ಕೆಲವು ಕ್ಲಾರಿಫಿಕೇಷನ್‌ಗಳನ್ನು ಕೇಳಿದ್ದಾರೆ. ನಾನು ಈಗಾಗಲೇ ಸ್ಪಷ್ಟಪಡಿಸಿದಂತೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಇದರ ಮೇಲೆ ಮಾತನಾಡುತ್ತಾ ಹೇಳಿದ್ದಾರೆ. Interaction with the trade bodies ಮಾಡಬೇಕು, ಇದರ ಬಗ್ಗೆ ಹೆಚ್ಚು ಪ್ರಚಾರ ಆಗಬೇಕು, ಇಂತಾದ್ದನ್ನೆಲಾ ಹೇಳಿದ್ದಾರೆ. ಈಗಾಗಲೇ ನೀವು ಹೇಳಿದಹಾಗೆ ಬಹಳ ಜನರಿಗೆ ತಿಳುವಳಿಕೆಂಯಾಗಬೇಕು. ಈಗಾಗಲೇ ಇಡೀ ಇಲಾಖೆಯನ್ನೇ ಗಣಕೀಕರಣ ಮಾಡಿ ಆಗಿದೆ. ಅಧಿಕಾರಿಗಳಿಗೆ ತರಬೇತಿಯನ್ನೂ ಕೂಡ ಕೊಟ್ಟಿದ್ದೇವೆ, ಸಿದ್ಧತೆಗಳನ್ನೆಲ್ಲಾ ಮಾಡಿದ್ದೇವೆ. Interaction ಕೂಡ ನಡೆಯುತ್ತಾ ಇದೆ, ಇದು ಮುಂದುವರಿಯುತ್ತದೆ. ಚರ್ಚೆಗಳು, ಅವರ ಅಭಿಪ್ರಾಯಗಳು, ಸಲಹೆಗಳು ಇರುತ್ತವೆ. ಎಂಪೌವರ್ ಕಮಿಟಿ ಡಿಸಾಲ್ವ್ ಆಗಿಬಿಡುವುದಿಲ್ಲ. 2005ಕ್ಕೆ ಇಂಪ್ಲಿಮೆಂಟ್ ಆದತಕ್ಷಣ, that is not going to be desolved. ಆಗಿಂದಾಗ್ಗೆ ಭೇಟಿ ಮಾಡುತ್ತಲೇ ಇರುತ್ತೇವೆ. ನಾವು ಒಂದು ಹೊಸ ಪದ್ಧತಿಗೆ ಹೋಗುವಾಗ, ಕೆಲವು ತೊಡಕುಗಳು, ತೊಂದರೆಗಳು ಬಂದೇ ಬರುತ್ತವೆ. ಒಳ್ಳೆಯವೂ ಇರುತ್ತವೆ, ಕೆಟ್ಟವೂ ಇರುತ್ತವೆ. ಒಂದು ಸಿಸ್ಟಂನಿಂದ ಇನ್ನೊಂದು ಸಿಸ್ಟಂಗೆ ಹೋಗಬೇಕಾದರೆ, ಕೆಲವು ತೊಡಕುಗಳು ಇರುತ್ತವೆ, ಕೆಲವು ಸಮಸ್ಯೆಗಳು ಬರಬಹುದು. ಕೆಲವು ಅನಾನುಕೂಲಗಳೂ ಆಗಬಹುದು. ಇವುಗಳನ್ನೆಲ್ಲಾ ಚರ್ಚೆ ಮಾಡುವುದಕ್ಕೋಸ್ಕರವೇ ಎಂಪೌವರ್ ಕಮಿಟಿ ಮುಂದುವರಿಯುತ್ತದೆ. ಈಗ ನಾವು ಸರ್ವೀಸ್ ಟ್ಯಾಕ್ಸ್ ಬೇಕು ಎಂದು ಹೇಳಿದ್ದೇವೆ. ಮತ್ತೆ ನಾವು ಇದನ್ನು ಪರ್ಸ್ಯೂ ಮಾಡಬೇಕಾಗಿದ್ದರೆ, ಕೇಂದ್ರಸರ್ಕಾರದ ಮೇಲೆ, ಎಂಪೌವರ್ ಕಮಿಟಿ ತೀರ್ಮಾನವನ್ನು ಹೇಳಿ ಒತ್ತಾಯ ತಂದು ಮಾಡಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಕೇಂದ್ರಸರ್ಕಾರದವರು ಇದನ್ನು ಎಕ್ಸಾಮಿನ್ ಮಾಡುತ್ತೇವೆ; ತಿದ್ದುಪಡಿ ತರುತ್ತೇವೆಂದು ಹೇಳಿದ್ದಾರೆ. ಅವರು ಸಂವಿಧಾನಕ್ಕೆ ತಿದ್ದುಪಡಿ ತಂದು, ಇದನ್ನು ಕೊಡುವವರೆಗೂ ನಾವು ಒತ್ತಾಯ ಮಾಡುತ್ತಿರುತ್ತೇವೆ. ಆದ್ದರಿಂದ, ಎಂಪೌವರ್ ಕಮಿಟಿ ಮುಂದುವರೆಯುತ್ತದೆ, ಆಗಾಗ ಬರತಕ್ಕ ಸಣ್ಣಪುಟ್ಟ ದೋಷಗಳು, ಅನಾನುಕೂಲಗಳನ್ನು ಸರಿಪಡಿಸತಕ್ಕ ಪ್ರಯತ್ನಗಳೂ ನಡೆಯುತ್ತಾ ಇರುತ್ತವೆ. ಇದು ಮಾನ್ಯ ಹೆಗಡೆಯವರು ಪ್ರಮುಖವಾಗಿ ಪ್ರಸ್ತಾಪ ಮಾಡಿರತಕ್ಕಂಥಾದ್ದು. ಇದು ಆಗಲೇ ಬಹಳ ದಿನಗಳಿಂದ ಅಂದರೆ, 1999ನೇ ಇಸವಿಯಿಂದ ಚರ್ಚೆ

---

† ಈ ಭಾಷಣವು ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಪರಿಷ್ಕರಿಸಲ್ಪಟ್ಟಿದೆ.

ನಡೆಯುತ್ತಲೇ ಇದೆ. ಎಂಪಾವರ್ ಕಮಿಟಿ ಆದದ್ದೂ ಕೂಡ 1999ರಲ್ಲಿ. ಅವತ್ತಿನಿಂದ ಚರ್ಚೆ ಆಗುತ್ತಾ ಇದೆ, ಇಲ್ಲಿ ಒಂದು ಸಾರಿ ವ್ಯಾಟ್ ಆಯಿತು, ಚರ್ಚೆಯಾಗಿ, ಪಾಸಾಗಿ, ಎಲ್ಲಾ ಆಗಿದೆ. ಅದಕ್ಕೇ ಸಣ್ಣಪುಟ್ಟ ತಿದ್ದುಪಡಿಗಳು. ಕೆಲವು ಹೊಸ ವಿಚಾರಗಳನ್ನು ಸೂಚಿಸಿದಾಗ, ಎಲ್ಲರೂ ಒಪ್ಪಿಕೊಂಡಂಥ ವಿಚಾರಗಳೇ. ಅದಕ್ಕೇ ಈ ಎಂಪವರ್ ಕಮಿಟಿ ಮಾಡಿರತಕ್ಕಂಥಾದ್ದು. ಈ ತಿದ್ದುಪಡಿ ತಂದಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ್ದೇನೆಂದರೆ, ಇದು ಯಾವ ಷೆಡ್ಯೂಲ್‌ನಲ್ಲಿ ಸೇರಿಸಿದ್ದೀರಿ ತೆಗೆಸಿ ಎಂದು ಹೇಳಿದರು. ಇದು ಯಾವ ಷೆಡ್ಯೂಲ್‌ನಲ್ಲಿ ಇಲ್ಲವೇ ಇಲ್ಲ. ಷೆಡ್ಯೂಲ್‌ನಲ್ಲಿ ಇಲ್ಲದೇ ಇರುವಂತಾದ್ದು, ಥರ್ಡ್ ಷೆಡ್ಯೂಲ್‌ಗೆ ಬಂದು ಸ್ಟಾಂಡರ್ಡ್ ರೇಟ್ ಹನ್ನೆರಡೂವರೆಗೆ ಆಗಿವೆ. ಕೆಲವೆಲ್ಲಾ ನೋಟಿಫಿಕೇಷನ್ ಮಾಡಿ ಆಯಾ ಕಾಲಕ್ಕೆ, ಒತ್ತಡಗಳಿಗೆ ಇನ್ನೇನೋ ಆಗಿ ಮಾಡಿಕೊಂಡು ಬಂದಿರುವುದು. ಇವತ್ತು ತೆರಿಗೆ ಕೊಡುವವರಿಗೆ ಶಕ್ತಿ ಇರುವವರೂ ಕೂಡ, ತೆರಿಗೆ ಹಾಕಿ ಎನ್ನುವಂಥ ಪರಿಸ್ಥಿತಿಯೂ ಕೂಡ ಇತ್ತು. ಅವರಿಗೆ ಸ್ಟಾಂಡರ್ಡ್ ರೇಟ್ 25 ಪರ್ಸೆಂಟ್ ಇತ್ತು. ಅದು ಈಗ ಹನ್ನೆರಡೂವರೆ ಪರ್ಸೆಂಟ್‌ಗೆ ಆಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ತಾವು ಸ್ಪೆಸಿಫಿಕ್ ಆಗಿ ಹೇಳಬೇಕು ಸಾರ್. ಜೀರೋನಲ್ಲಿ ಇಟ್ಟಿದ್ದು ಯಾವುದು?

ಶ್ರೀ ಸಿದ್ದರಾಮಯ್ಯ:- Zeroನಲ್ಲಿ ಪೆಟ್ರೋಲ್, ಲಿಕ್ಕರ್ ಇತ್ಯಾದಿ ತೋರಿಸಿದ್ದೇವಲ್ಲಾ. . .

ಶ್ರೀ ಜೆ.ಸಿ.ಮಾಧುಸ್ವಾಮಿ:- ನಾವು ಆ ಜೀರೋ ಕೇಳುವುದಿಲ್ಲ. ನಿಮ್ಮ ಷೆಡ್ಯೂಲ್‌ನಲ್ಲಿ ಜೀರೋ ಐಟಂ ಇದ್ದುದ್ದು ಬೇಕು.

ಶ್ರೀ ಸಿದ್ದರಾಮಯ್ಯ:- ಜೀರೋ ಇರತಕ್ಕಂಥಾದ್ದು, ನಮ್ಮ ಷೆಡ್ಯೂಲುಗಳಲ್ಲಿರತಕ್ಕಂಥಾದ್ದು ಬಹಳಷ್ಟು ಮುಂದುವರಿಯುತ್ತವೆ. ಅಲ್ಲಿ ಎಂಪೌವರ್ ಕಮಿಟಿಗೆ ಒಪ್ಪಿಗೆಯಾಗಿರತಕ್ಕಂಥವು, ಜೀರೋ ಲಿಸ್ಟ್‌ನಲ್ಲಿಡಬೇಕೆಂದು ಇರತಕ್ಕವು ಜೀರೋನಲ್ಲಿ ಮುಂದುವರಿಯುತ್ತವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ಆ ಐಟಂಗೆ, ಈ ಮೊದಲೇ ಎಷ್ಟು ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದಿರಿ? ಈಗ 4 ಪರ್ಸೆಂಟ್‌ಗೆ ಬರುವುದಕ್ಕೆ ಮೊದಲು ಎಷ್ಟಿತ್ತು ಎಂಬುದು ನಮಗೆ ಗೊತ್ತಾಗಬೇಕಲ್ಲ.

ಶ್ರೀ ಸಿದ್ದರಾಮಯ್ಯ:- ಮೊದಲು ಅಕ್ಕಿಗೆ ಟ್ಯಾಕ್ಸ್ ಇರಲಿಲ್ಲ; ಈಗ ವ್ಯಾಟ್‌ನಲ್ಲಿ ಇದೆ. 4 ಪರ್ಸೆಂಟ್ ಇದ್ದುದ್ದನ್ನು ತಮಿಳುನಾಡಿನವರು ನಮಗೆ ಎಕ್ಸ್‌ಂಪ್‌ಷನ್ ಬೇಕು ಎಂದು ಹೇಳಿದ್ದಾರೆ. ಟೀ ಬೆಳೆಯುವವರು ಇದ್ದಾರಲ್ಲಾ, ಅಸ್ಸಾಂ, ಕೇರಳ ಹಾಗೂ eastern part ನಲ್ಲಿ ಟೀ ಎಲ್ಲೆಲ್ಲಿ ಬೆಳೆಯುತ್ತಾರೆ, ಅವರೇನು ಹೇಳುತ್ತಾರೆಂದರೆ, ಹನ್ನೆರಡೂವರೆ ಪರ್ಸೆಂಟ್ ಬೇಡ 4 ಪರ್ಸೆಂಟ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಬೇರೆ ಪದಾರ್ಥ ಬೆಳೆಯುವವರು, ಇದು ನಾವು ಬೆಳೆಯುವುದಿಲ್ಲ, ಕಡಿಮೆ ರೇಟಿಗೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ:- ತಾವು ಹಣಕಾಸಿನ ಮಂತ್ರಿಗಳು. ಜಾಸ್ತಿ ಇರುವುದನ್ನು ಕಡಿಮೆ ಮಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ. ಈ ಬಿಲ್ ಪಾಸ್ ಆಗುವುದರಿಂದ, ಫ್ರೀ ಬಜೆಟ್ ಆಗಿ, ಬಜೆಟ್‌ನಲ್ಲಿ ಬರುವುದಕ್ಕೆ ಮೊದಲೇ ಈ ತರಹ ಯಾವುದೋ ಬಿಲ್‌ಗೆ ಅಮೆಂಡ್‌ಮೆಂಟ್ ತರುತ್ತೇವೆಂದು, ಟ್ಯಾಕ್ಸೇಷನ್ ಜಾಸ್ತಿ ಮಾಡಿಕೊಳ್ಳುವುದಕ್ಕೆ ಹೊರಟರೆ ನಾವು ಸುಮ್ಮನೆ ಕುಳಿತುಕೊಂಡು ನೋಡಬೇಕೇ? ಅಷ್ಟೇ ಪ್ರಶ್ನೆ. ನೀವು ಟ್ಯಾಕ್ಸ್ ಜಾಸ್ತಿ ಮಾಡಬೇಕಾದರೆ ಬಜೆಟ್‌ನಲ್ಲಿ ತನ್ನಿ ಅವತ್ತು ಕುಳಿತುಕೊಂಡು ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ:– ಬಜೆಟ್‌ನಲ್ಲಿ ತರುವುದಕ್ಕಾಗುವುದಿಲ್ಲ ಒಂದು ಸಾರಿ ವ್ಯಾಟ್ ಆದಮೇಲೆ ಮತ್ತೆ ಅವು ಬಜೆಟ್‌ನಲ್ಲಿ ಬರುವುದಿಲ್ಲ. ಈ ರೇಟ್‌ಗಳೇ ಕಂಟಿನ್ಯೂ ಆಗುತ್ತವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ವ್ಯಾಟ್‌ಗೆ ಒಪ್ಪಿಕೊಂಡು ಬಹಳ ದಿವಸ ಆಗಿ ಹೋಗಿದೆ. ಷೆಡ್ಯೂಲ್ ಆಫ್ ಐಟಂಸ್‌ನ್ನು ಏಕೆ ನೀವು ಚೇಂಜ್ ಮಾಡುತ್ತಿದ್ದೀರಿ?

ಶ್ರೀ ಸಿದ್ದರಾಮಯ್ಯ:– ಕರ್ನಾಟಕ ರಾಜ್ಯ ಒಂದೇ ತೀರ್ಮಾನ ಮಾಡತಕ್ಕಂಥಾದ್ದು ಅಲ್ಲ. ಒಂದು ಹೊಸ ಪದ್ಧತಿಗೆ ಹೋಗುವಾಗ ನಾವು ಹೇಳಿದ್ದನ್ನೇ ಎಲ್ಲರೂ ಒಪ್ಪಿಕೊಳ್ಳಬೇಕೆಂದು ಅವರನ್ನು ಬಲಾತ್ಕಾರ ಮಾಡುವುದಕ್ಕೆ ಆಗುವುದಿಲ್ಲ. ಕರ್ನಾಟಕ ಹೇಳಿದ್ದನ್ನೇ ಒಪ್ಪಿಕೊಳ್ಳಬೇಕು, ಅವೆಲ್ಲಾ ಸಾಧ್ಯವೇ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಕಾನ್‌ಸೆನ್ಸ್‌ಸ್ ಮೇಲೆ ತೀರ್ಮಾನಗಳಾಗುತ್ತವೆ, ಎಂಪೌವರ್ ಕಮಿಟಿ ಚರ್ಚೆ ಮಾಡಿ ಮಾಡಿ ನಮ್ಮ ಅಭಿಪ್ರಾಯಗಳನ್ನೆಲ್ಲಾ ಅವರಿಗೆ ಹೇಳಿದ್ದೇವೆ. ಅದು ಆದಮೇಲೆ ಸರ್ವಸಮ್ಮತ ವಾದ........

ಶ್ರೀ ಜಿ ವಿ ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ಈಗ ಪಂಜಾಬ್ ಮತ್ತು ಹರಿಯಾಣದವರಿಗೆ ಫುಡ್‌ಗ್ರೈನ್ಸ್ ಮೇಲೆ ಟ್ಯಾಕ್ಸ್ ಹಾಕುವುದರಿಂದ ದೊಡ್ಡ ಅನಾಹುತಗಳೂ ಆಗುವುದಿಲ್ಲ. ಏಕೆಂದರೆ ಅವರು ಮಿಲಿಯನ್ಸ್ ಆಫ್ ಟನ್ಸ್ ಬೆಳೆಯುತ್ತಾರೆ, ಹೆಚ್ಚು ಎಕ್ಸ್‌ಪೋರ್ಟ್ ಮಾಡುತ್ತಾರೆ, ಅವರಿಗೆ ಟ್ಯಾಕ್ಸ್ ಹಾಕಿ, ನಮ್ಮ ಕರ್ನಾಟಕ ರಾಜ್ಯದಂತಹ ರಾಜ್ಯದಲ್ಲಿ ನೀರೂ ಇಲ್ಲ, ಭತ್ತ ಇಲ್ಲ, ಇಲ್ಲಿ ಫುಡ್‌ಗ್ರೈನ್ಸ್ ಮೇಲೆ ಟ್ಯಾಕ್ಸ್ ಹಾಕಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ:– ಅದಕ್ಕೋಸ್ಕರವೇ, ಅಕ್ಕಿಗೆ ತಮಿಳುನಾಡಿನವರು ಎಗ್ಜಮೆಷನ್ ಕೇಳಿದರೆ ನಾವೂ ಎಗ್ಜಮೆಷನ್ ಮಾಡುತ್ತೇವೆಂದು ಹೇಳಿದ್ದೇವೆ. ನಾನು ತಮಿಳುನಾಡು ಎಂದು ಏಕೆ ಹೇಳಿದೆ ಅಂದರೆ ತಮಿಳುನಾಡಿನವರು ಒಬ್ಬರೇ ಕೇಳಿರುವುದು ಅದನ್ನು ಬೇರೆ ಯಾವ ರಾಜ್ಯದವರೂ ಎಗ್ಜಮೆಷನ್ ಕೇಳಿಲ್ಲ. ಅದಕ್ಕೆ ನಾನು ತಮಿಳುನಾಡನ್ನು ಉದಾಹರಿಸುತ್ತಿದ್ದೇನೆಯೇ ಹೊರತು, ತಮಿಳುನಾಡನ್ನೇ ತೆಗೆದುಕೊಳ್ಳುತ್ತಿದ್ದೇನೆಂದು ಅಲ್ಲ, ಅವರು ಕೇಳಿರುವುದರಿಂದ ಹೇಳಿದ್ದೇನೆ ಅಷ್ಟೇ. ಅದ್ದರಿಂದ ನಾವೂ ಕೂಡ ತಮಿಳುನಾಡಿಗೆ ಎಗ್ಜಮೆಷನ್ ಸಿಕ್ಕಿದರೆ ನಮಗೂ ಸಿಗಬೇಕು; ನಾವು ಎಂಗ್ಜಮ್ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಷೆಡ್ಯೂಲ್ 3ಕ್ಕೆ ನೀವು ಏನು ಹೊಸ ಐಟಂ ಇನ್‌ಕ್ಲೂಡ್ ಮಾಡುತ್ತಿದ್ದೀರಿ ಅವುಗಳ ಮೇಲೆ ಎಷ್ಟು ಟ್ಯಾಕ್ಸ್ ....

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಹನ್ನೆರಡೂವರೆ ಪರ್ಸೆಂಟ್ ಇದೆ. ಮೊದಲು ಐಟಂ ಮೇಲೆ ಇರಲೇ ಇಲ್ಲ ಅವು ಯಾವುವು? ಯಾವುದು ಬರುತ್ತದೆಯೋ ಅದಕ್ಕೆ ಮಾತ್ರ. ಕೆಲವು 25 ಪರ್ಸೆಂಟ್ ಇವೆ. ಅವುಗಳನ್ನೇ ಸ್ಟ್ಯಾಂಡರ್ಡ್ ರೇಟ್‌ಗೆ ಅಂದರೆ ಹನ್ನೆರಡೂವರೆ ಪರ್ಸೆಂಟ್‌ಗೆ ಮಾಡಿದ್ದೇವೆ. ಆ ಪಟ್ಟಿಯನ್ನು ನಾನು ಅಮೇಲೆ ಕಳುಹಿಸಿ ಕೊಡುತ್ತೇನೆ. 25 ಪರ್ಸೆಂಟ್ ಯಾವುದು ಸ್ಟ್ಯಾಂಡರ್ಡ್ ರೇಟ್ ಇದ್ದವು ಎಂದು ನಾನು ಹೇಳಿದ್ದೇನೆ ಆ ಪಟ್ಟಿಯನ್ನು ಕೊಡಿಸಿಕೊಡುತ್ತೇನೆ, ಕುಳಿತುಕೊಳ್ಳಿ. ಆದ್ದರಿಂದ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಇದೆಯಲ್ಲಾ ಈಗ ಅದು 4 ಪರ್ಸೆಂಟ್ ಇದೆ. ಅದರಲ್ಲಿ ಏನೂ ಹೆಚ್ಚು ಕಡಿಮೆಯಾಗಿಲ್ಲ. ಎಲ್ಲಾ ಮೆಕ್ಯಾನಿಕಲ್ ಮೆಟೀರಿಯಲ್ಸ್ ಇರುತ್ತವೆಯಲ್ಲಾ, ಮಷಿನ್ಸ್ ಇವಕ್ಕೆ 4 ಪರ್ಸೆಂಟ್ ಈಗಲೂ ಇತ್ತು, ಅವು ಆ 4 ಪರ್ಸೆಂಟ್‌ನಲ್ಲಿಯೇ ಮುಂದುವರಿಯುತ್ತದೆ. ಇನ್ನೂ ಈ ವ್ಯಾಟ್ ಬಂದಮೇಲೆ ಸ್ವಲ್ಪ ಕಡಿಮೆ ಆಗಬಹುದು. ಏಕೆಂದರೆ

ಇನ್‌ಪುಟ್ ಟ್ಯಾಕ್ಸ್ ರಿಬೇಟ್ ಕೊಡುತ್ತೇವೆಂದು ಹೇಳಿದ್ದೇವೆ. ಆ ಇನ್‌ಪುಟ್ ಟ್ಯಾಕ್ಸ್‌ಗೆ ರಿಬೇಟ್ ಕೊಡುವಾಗ 4 ಪರ್ಸೆಂಟ್‌ಗಿಂತ ಕಡಿಮೆ ಬರಬಹುದು. ಎಲ್ಲಿ ಟ್ಯಾಕ್ಸ್ ಸಫರ್ ಆಗಿದೆ. ಅಲ್ಲಿ ಇದು ಬಂದಮೇಲೆ there is no tax on tax. ಎಲ್ಲೋ ಒಂದು ಕಡೆ ಟ್ಯಾಕ್ಸ್ ಸಫರ್ ಆಗಿದ್ದರೆ ಅದನ್ನು ಕೊಡಬೇಕಾಗುತ್ತದೆ. ಉದಾಹರಣೆಗೆ ಬಟ್ಟೆ. . .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಯಾವ್ಯಾವು ಇವೆ ಎನ್ನತಕ್ಕಂಥಾದ್ದು ....

ಶ್ರೀ ಸಿದ್ದರಾಮಯ್ಯ:– ತಾವು ಸ್ವಲ್ಪ ಕುಳಿತುಕೊಳ್ಳಿ. ನೀವು ಹೇಳಿದ್ದನ್ನು ನಾನು ಕೇಳಿದ್ದೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಈಗ ಇನ್‌ಪುಟ್ ಟ್ಯಾಕ್ಸ್‌ನಲ್ಲಿ ರೆಪ್ರಸೆಂಟ್ ಮಾಡುವಾಗ ಯಾವುದಕ್ಕೆ ಟ್ಯಾಕ್ಸ್ ಕಡಿಮೆ ಇತ್ತು, ಯಾವುದಕ್ಕೆ ಜಾಸ್ತಿ ಇತ್ತು ಎಂದು ಲಿಸ್ಟ್ ಕೊಡುತ್ತೀರಿ. ಅದರಲ್ಲಿ ಮೊದಲು ಇಷ್ಟು ಇತ್ತು, ಈಗ ಇಷ್ಟು ಮಾಡಿದ್ದೇವೆ, ಇದನ್ನು ಕೊಟ್ಟಿಲ್ಲ. ತಾವು ಬರೀ ಥರ್ಡ್ ಷೆಡ್ಯೂಲ್‌ನಲ್ಲಿ ತಂದಿದ್ದೀರಿ, ಆದರೆ ಯಾವುದಕ್ಕೆ ಜಾಸ್ತಿ ಇತ್ತು ಯಾವುದು ಎಷ್ಟು ಇತ್ತು, ಯಾವುದು ಕಡಿಮೆ ಮಾಡಿದ್ದೀರಿ ಅದು ಇಲ್ಲ.

ಶ್ರೀ ಸಿದ್ದರಾಮಯ್ಯ:– ನಾನು ಪಟ್ಟಿ ಒದಗಿಸಿಕೊಡುತ್ತೇನೆ, ದಯಮಾಡಿ ಕುಳಿತು ಕೊಳ್ಳಿ. ಈಗ ನನ್ನ ಹತ್ತಿರ ಷೆಡ್ಯೂಲ್ ಇದೆ. ನಿಮಗೆಲ್ಲಾ ಒಂದೊಂದು ಕಾಪಿ ಕೊಡಿಸುತ್ತೇನೆ. ಯಾವ ಷೆಡ್ಯೂಲ್‌ನಲ್ಲಿ ಎಷ್ಟೆಷ್ಟು ಇದೆ ಎನ್ನುವ ಮಾಹಿತಿಯು ಪ್ರತಿಯನ್ನು ಎಲ್ಲರಿಗೂ ಕೊಡಿಸೋಣ. ಅದ್ದರಿಂದ ಇದು ನಾವು ಇಲ್ಲಿ ಚರ್ಚೆ ಮಾಡಬೇಕಾಗಿರತಕ್ಕಂಥಾದ್ದು 'ಒಂದು ಪದಾರ್ಥ ಹೆಚ್ಚಾಯಿತು, ಕಡಿಮೆಯಾಯಿತು ಎನ್ನುವುದಕ್ಕಿಂತ ಹೆಚ್ಚಾಗಿ,' ಒಂದು ಹೊಸ ಪದ್ಧತಿಗೆ ಹೋಗುತ್ತಿದ್ದೇವೆ. ಆ ಹೊಸ ಪದ್ಧತಿಯನ್ನು ಇವತ್ತು ಇಡೀ ರಾಷ್ಟ್ರದಲ್ಲಿ ಎಲ್ಲರೂ ಒಪ್ಪಿಕೊಳ್ಳುತ್ತಿದ್ದಾರೆ. ಅದರಿಂದ ಎಲ್ಲೋ ಸಣ್ಣಪುಟ್ಟ ಕೆಲವು ತಪ್ಪುಗಳು ಇದ್ದರೆ ಅದನ್ನು ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ವ್ಯಾಟ್ ಬಗ್ಗೆ ನಾವೇನೂ ಬಾಗಿಲು ಮುಚ್ಚಿಬಿಡುವುದಿಲ್ಲ. ಬಾಗಿಲು ಮುಚ್ಚಿಬಿಟ್ಟು there is no scope for discussion ಎಂದೇನೂ ಹೇಳಿಲ್ಲ. ನಮಗೇನೂ ಅವಕಾಶವೇ ಇಲ್ಲ, ಎಂಬ ಪ್ರಶ್ನೆ ಇಲ್ಲ ಎಂಪವರ್ ಕಮಿಟಿಯಲ್ಲಿ ಮತ್ತೇ ನಮ್ಮ ಅಭಿಪ್ರಾಯ ಹೇಳುತ್ತೇವೆ. ಇಲ್ಲಿ ಹೇಳಿದಂತಹ ಅಭಿಪ್ರಾಯಗಳು ಈ ತರಹದಲ್ಲಿವೆ ಎಂದು ಎಂಪವರ್ ಕಮಿಟಿಯಲ್ಲಿ ಮತ್ತೆ ಹೇಳುವುದಕ್ಕೆ ಅವಕಾಶ ಇದೆ. ಎಂಪವರ್ ಕಮಿಟಿ ಅದಕೋಸ್ಕರವೇ ಆಗಿಂದಾಗ್ಗೆ ಮೀಟಿಂಗ್ ಮಾಡುತ್ತಲೇ ಇರುತ್ತದೆ. ನಮ್ಮ ಅಹವಾಲುಗಳನ್ನು ಕೇಳಬೇಕಾಗುತ್ತದೆ. ಬೇರೆ ರಾಜ್ಯದ ಅಹವಾಲುಗಳನ್ನು ಕೇಳ ಬೇಕಾಗುತ್ತದೆ. ನಾವೇ ಇರುವುದು ಅಲ್ಲಿ ಫೈನಾನ್ಸ್ ಮಿನಿಸ್ಟರ್‌ಗಳು. ಫೈನಾನ್ಸ್ ಮಿನಿಸ್ಟರ್ಸ್ ಇರತಕ್ಕಂಥಾದ್ದೇ ಎಂಪವರ್ ಕಮಿಟಿ. Empower committee is headed by one of the finance ministers of the States.

ಶ್ರೀ ಜೆ.ಸಿ. ಮಾಧುಸ್ವಾಮಿ:– ಎಂಪವರ್ ಕಮಿಟಿಯಲ್ಲಿ ಕುಳಿತುಕೊಳ್ಳುವುದೇಕೆ? ವ್ಯಾಟ್ ಏಕೆ, ಚರ್ಚೆ ಮಾಡುವುದೇಕೆ ಎನ್ನುವುದನ್ನು ನಾವು ಹೇಳಲೇ ಇಲ್ಲ. ಶಾಸನ ಆಗುವುದಕ್ಕೆ ಮೊದಲೇ ನಮಗೆ ಒಂದು ಮಾಹಿತಿ ಇರಬೇಕಲ್ಲಾ. ಬಿಲ್ ಪಾಸ್ ಮಾಡಿ ಕೊಟ್ಟ ಮೇಲೆ ಮಾಹಿತಿ ಒದಗಿಸಿಕೊಟ್ಟರೆ ನಾವೇನು ಮಾಡೋಣ.

ಶ್ರೀ ಸಿದ್ದರಾಮಯ್ಯ:– ಭಾರೀ ವ್ಯತ್ಯಾಸಗಳು ಏನೂ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಈ ರಾಜ್ಯದ ಜನತೆಗೆ ಗೊತ್ತಾಗಬೇಕಲ್ಲಾ. ನಾವು ಕೆಲವು ವಿಷಯಗಳನ್ನು ರೈಜ್ ಮಾಡಿದ್ದೇವೆ. ಜನಗಳಿಗೆ ಒಂದ ಸಂದೇಶ ಹೋಗಬೇಕಲ್ಲಾ. ಭಾರೀ ಪ್ರಮಾಣ

ಅಗಿಲ್ಲ, ಈ ಬಿಲ್ ಅಮೆಂಡ್‌ಮೆಂಡ್ ಅದ್ದರಿಂದ ಎಂದು ಹೇಳಿ. ನೀವು ಜೀರೋ ರೇಟ್ ಆಫ್ ಟ್ಯಾಕ್ಸ್‌ನಲ್ಲಿದ್ದನ್ನು ತಂದು ಥರ್ಡ್ ಷಡ್ಯೂಲ್‌ನಲ್ಲಿ ಇಟ್ಟಿದ್ದೇವೆ ಅಂದರೆ ವಿರೋಧಪಕ್ಷದವರು ಏನು ಮಾಡುತ್ತಿದ್ದರು ಎಂದು ಹೇಳಿದರೆ ನಾವು ಉತ್ತರ ಹೇಳಬೇಕಲ್ಲಾ ನೀವು ನನಗೆ ಕನ್‌ವಿನ್ಸ್ ಮಾಡಬೇಕಲ್ಲಾ. ನೀವು ಸುಮ್ಮನೇ ತರಲಿಲ್ಲ. ಮೊದಲೇ ನಿಮ್ಮ ಆಕ್ಟ್‌ನಲ್ಲಿ ಹೇಳಿಬಿಟ್ಟಿರಿ. ಷೆಡ್ಯೂಲ್-3ರಲ್ಲಿ ಎಷ್ಟು ಪರ್ಸೆಂಟ್ ಟ್ಯಾಕ್ಸ್ ಆಗುತ್ತದೆ; ಷೆಡ್ಯೂಲ್-4ರಲ್ಲಿ ಎಷ್ಟು ಪರ್ಸೆಂಟ್ ಟ್ಯಾಕ್ಸ್ ಆಗುತ್ತದೆಂದು ನೀವು ಹೇಳಿಬಿಟ್ಟಿದ್ದೀರಿ. ನಿಮ್ಮ ಒರಿಜನಲ್ ಆಕ್ಟ್‌ನಲ್ಲಿ, ಷೆಡ್ಯೂಲ್‌ನಿಂದ ಷೆಡ್ಯೂಲ್‌ಗೆ ಛೇರಿಜ್ ಮಾಡುವುದು ಬಹಳ ಸುಲಭ ಅಲ್ಲವೇ ಸಾರ್, ಟ್ಯಾಕ್ಸ್ ಜಾಸ್ತಿ ಹಾಕುತ್ತೇವೆಂದು ಹೇಳುವುದು ಬಿಟ್ಟು ಈ ಷೆಡ್ಯೂಲ್‌ನಿಂದ ತೆಗೆದು ಆ ಷೆಡ್ಯೂಲ್‌ಗೆ ಒಂದು ಐಟಂ ಇಟ್ಟುಬಿಟ್ಟರೆ ಆಯಿತು, ಅಟೋಮ್ಯಾಟಿಕ್ ಅಗಿ ಅಟ್ರಾಕ್ಟ್ ಆಗುತ್ತದೆ. ನಾವೀಗ ಆಕ್ಟ್ ಅಮೆಂಡ್‌ಮೆಂಟ್ ಮಾಡುವುದು ಟ್ಯಾಕ್ಸ್‌ನ್ನು ಅಟ್ರಾಕ್ಟ್ ಮಾಡುತ್ತದೆ ಅಂದರೆ ನಾವು ಹೇಗೆ ಅಮೆಂಡ್ ಮಾಡುವುದಕ್ಕೆ ಆಗುತ್ತದೆ ಹೇಳಿ. ಏನೂ ಟ್ಯಾಕ್ಸ್ ಹಾಕುವುದಿಲ್ಲ ಅವಕ್ಕೆ ಐಟಂನ್ನು ಇಲ್ಲಿಂದ ಅಲ್ಲಿಗೆ ಇಡುತ್ತೇವೆ, ಎಗಿಜಸ್ಟಿಂಗ್ ಟ್ಯಾಕ್ಸ್‌ನ್ನು ಮೈನ್‌ಟೇನ್ ಮಾಡುತ್ತೇವೆಂದು ತಾವು ಹೇಳಿ ನಮ್ಮದೇನೂ ತಕರಾರು ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಈಗ ಟ್ಯಾಕ್ಸ್ ವೈಡನ್ ಮಾಡುವುದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ ಎಗ್ಸಿಸ್ಟಿಂಗ್ ಇರತಕ್ಕಂಥ ವಸ್ತುಗಳು ಏನಿವೆ ಅದು ಕಡಿಮೆ ಇರುವುದನ್ನು ಜಾಸ್ತಿ ಮಾಡುವುದಾದರೆ ನಾವು ಒಪ್ಪಲಿಕ್ಕೆ ಆಗುವುದಿಲ್ಲ ಎಂದು ನಾವು ಹೇಳುವುದು. ನೀವು ಟ್ಯಾಕ್ಸ್ ವೈಡನ್ ಮಾಡಿ, ಈಗ ಮೊದಲು ಟ್ಯಾಕ್ಸೇಷನ್ ವ್ಯಾಪ್ತಿಗೆ ಬಂದಿರುವುದಿಲ್ಲ. ಯಾರೆಲ್ಲ ಟ್ಯಾಕ್ಸೇಷನ್ ವ್ಯಾಪ್ತಿಯಿಂದ ಹೊರಗಡೆ ಇದ್ದಾರೋ ಅವರನ್ನು ಟ್ಯಾಕ್ಸ್ ಒಳಗಡೆ ತನ್ನಿ. That is how widening the tax system. ಅದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಹಿಂದೆ ಯಾವುದನ್ನು ಟ್ಯಾಕ್ಸ್ ಎಗ್ಜಂಷನ್ ಮಾಡಿದ್ದರು ಅದನ್ನು ಕಡಿಮೆ ಟ್ಯಾಕ್ಸ್ ಇದ್ದದ್ದನ್ನು ಈಗ ಹೆಚ್ಚು ಮಾಡಲಿಕ್ಕೆ ಒಂದು ಷೆಡ್ಯೂಲ್‌ನಿಂದ ಇನ್ನೊಂದು ಷೆಡ್ಯೂಲ್‌ಗೆ ಶಿಫ್ಟ್ ಮಾಡತಕ್ಕಂಥಾದ್ದು, ಏನಿದೆ ಆವಾಗ ಕಡಿಮೆ ಇದ್ದವರಿಗೆ ಜಾಸ್ತಿಯಾಗುತ್ತದೆ. ಜಾಸ್ತಿ ಇದ್ದವರಿಗೆ ಕಡಿಮೆಯಾಗುತ್ತಾ ಹೋಗುತ್ತದೆ. That is also there.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈಗ ತಿದ್ದುಪಡಿಯಲ್ಲಿ ಹೇಳಿರತಕ್ಕಂಥಾದ್ದು ಥರ್ಡ್ ಷೆಡ್ಯೂಲ್‌ಗೆ ಬರುತ್ತದೆ ಅಂದರೆ ಯಾವ ಷೆಡ್ಯೂಲ್‌ನಲ್ಲಿಯೂ ಇಲ್ಲದೇ ಇರತಕ್ಕಂಥಾದ್ದು, ಫಸ್ಟ್ ಷೆಡ್ಯೂಲ್‌ನಲ್ಲಿಯೂ ಇರಲಿಲ್ಲ, ಸೆಕೆಂಡ್ ಷೆಡ್ಯೂಲ್‌ನಲ್ಲಿಯೂ ಇರಲಿಲ್ಲ. 25 ಪರ್ಸೆಂಟ್ ಸ್ಟ್ಯಾಂಡರ್ಡ್ ಟ್ಯಾಕ್ಸ್ ಯಾವುದು ಇರುವುದಿಲ್ಲ 25 ಪರ್ಸೆಂಟ್ ಸ್ಟ್ಯಾಂಡರ್ಡ್ ರೇಟ್ಸ್ ಎಂದು ಇತ್ತು, ಅವನ್ನು ಥರ್ಡ್ ಷೆಡ್ಯೂಲ್‌ಗೆ ಹಾಕಿದ್ದೇವೆ. 4 ಪರ್ಸೆಂಟ್‌ನಲ್ಲಿರುವವು ಇಲ್ಲ, ಅಲ್ಲಿ ತೆಗೆದುಕೊಂಡು ಹೋಗಿ ಹನ್ನೆರಡೂವರೆ ಪರ್ಸೆಂಟ್‌ಗೆ ಸೇರಿಸಿಲ್ಲ, ಗೊತ್ತಾಯಿತಲ್ಲಾ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಫಸ್ಟ್ ಷೆಡ್ಯೂಲ್‌ನಲ್ಲಿ ಇಲ್ಲ. ಸೆಕೆಂಡ್ ಷೆಡ್ಯೂಲ್‌ನಲ್ಲಿ ಇಲ್ಲ ಥರ್ಡ್ ಷೆಡ್ಯೂಲ್‌ಗೆ ಅಂತಾದ್ದನ್ನು ತಂದಿದ್ದರೆ ನಮ್ಮದೇನೂ ತಕರಾರು ಇಲ್ಲ. ಅಲ್ಲಿರುವುದನ್ನು ಇಲ್ಲಿಗೆ ತಂದಿದ್ದರೆ ಅದನ್ನು ರಿವ್ಯೂ ಮಾಡಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ:- ಯಾವ ಷೆಡ್ಯೂಲ್‌ನಲ್ಲಿಯೂ ಇಲ್ಲದೇ ಇರತಕ್ಕಂಥಾವು ಥರ್ಡ್ ಷೆಡ್ಯೂಲ್‌ಗೆ ಬಂದಿರುತ್ತವೆ. ಆಗ ಫಸ್ಟ್ ಷೆಡ್ಯೂಲ್‌ನವೂ ಬರುವುದಿಲ್ಲ. ಸೆಕೆಂಡ್ ಷೆಡ್ಯೂಲ್‌ನವೂ ಅಲ್ಲಿಗೆ ಬರುವುದಿಲ್ಲ. ಅವು ಸ್ಟ್ಯಾಂಡರ್ಡ್ ರೇಟ್ ಎಲ್ಲಿತ್ತೋ ಆ ರೇಟ್‌ನವು ಮಾತ್ರ ಅಲ್ಲಿರುತ್ತವೆ. ಇದು

ಒಂದು ಅವರಿಗೆ ಕ್ಲಾರಿಫಿಕೇಶನ್. ಎರಡನೆಯದು ಇನ್ನೂ ಕೆಲವೆಲ್ಲಾ ಟ್ಯಾಕ್ಸ್ ಕಡಿಮೆಯಾಗುತ್ತವೆ. 8 ಪರ್ಸೆಂಟ್ ಇದ್ದವೆಲ್ಲಾ 4 ಪರ್ಸೆಂಟ್‌ಗೆ ಬಂದಿವೆ. ಟ್ಯಾಕ್ಸ್ ಕಡಿಮೆಯಾಗುತ್ತವೆ. 4 ಪರ್ಸೆಂಟ್ 8 ಪರ್ಸೆಂಟ್ 12 ಪರ್ಸೆಂಟ್ ಇತ್ತಲ್ಲಾ ಅವು ಕಡಿಮೆಯಾದಾಗ ಕಡಿಮೆ ಆಯಿತು ಎಂದು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಕಡಿಮೆ ಆಯಿತು ಎಂದು ಹೇಳುವುದಕ್ಕಾದರೂ ನೀವು ಒಂದು ಮಾಹಿತಿ ಕೊಡಬೇಕಲ್ಲಾ. ಇಂತಿಂತಹ ಐಟಂ ಕಡಿಮೆಯಾಗುತ್ತವೆ ಎಂದು.

ಶ್ರೀ ಸಿದ್ದರಾಮಯ್ಯ:– ನಿಮ್ಮ ಪರ್ಟಿಕ್ಯುಲರ್ ಪ್ರಶ್ನೆ ಏನಿದೆಯಲ್ಲಾ ಥರ್ಡ್ ಷೆಡ್ಯೂಲ್‌ಗೆ ಯಾವುವು ಬಂದಿವೆ ಅವು ಫಸ್ಟ್, ಸೆಕೆಂಡ್ ಷೆಡ್ಯೂಲ್‌ನಲ್ಲಿರುವವು ಇಲ್ಲ. ಷೆಡ್ಯೂಲ್‌ನಲ್ಲಿ ಇಲ್ಲದೇ ಇದ್ದವು ಥರ್ಡ್ ಷೆಡ್ಯೂಲ್‌ನಲ್ಲಿವೆ. ಇದು ಒಂದು ಎಕ್ಸ್‌ಪ್ಲನೇಶನ್ಸ್ ಮತ್ತೆ ಮಾನ್ಯ ಉದಾಸಿಯವರು ಹೇಳಿದರಲ್ಲಾ 5 ಸಾವಿರದಿಂದ 50 ರೂಪಾಯಿಗಳವರೆಗೂ . . . . . .

ಶ್ರೀ ಜೆ.ಸಿ. ಮಾಧುಸ್ವಾಮಿ:– ಅವರು ಹೇಳಿದ್ದು ಸ್ವಲ್ಪ ಕೇಳಿ. 50 ರೂಪಾಯಿಯಿಂದ 5 ಸಾವಿರ ರೂಪಾಯಿ ಅದು ಒಂದು ದೊಡ್ಡ ಗ್ಯಾಪ್. ಅಲ್ಲಿ ಯಾರಿಗೋ ಒಬ್ಬ ಅಧಿಕಾರಿಗೆ 500 ರೂಪಾಯಿ ಕೊಟ್ಟರೆ ಅವನು 50 ರೂಪಾಯಿ ಹಾಕಬಹುದು. ಸ್ವಲ್ಪ ಯೋಚನೆ ಮಾಡಿ. ಇಲ್ಲ ಅಂದರೆ 5 ಸಾವಿರ ರೂಪಾಯಿ ಹಾಕಬಹುದು. ಹ್ಯೂಜ್ ಗ್ಯಾಪ್ ಏತಕ್ಕೆ ಇಡುತ್ತೀರಿ? ಕಡಿಮೆ ಮಾಡಿ ಸಾರ್.

ಶ್ರೀ ಸಿದ್ದರಾಮಯ್ಯ:– ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಸಿ.ಎಂ. ಉದಾಸಿ:– ಕರೆಪ್ಷನ್‌ಗೆ ಆಗುವುದು ಬೇಡ.

ಶ್ರೀ ಸಿದ್ದರಾಮಯ್ಯ:– ಕರೆಪ್ಷನ್ ಮಾಡಿಯೇ ಮಾಡುತ್ತಾರೆ ಮಾಡುವವರು ಇದ್ದರೆ ನಾವು ಚಾಪೆ ಕೆಳಗಡೆ ನುಗ್ಗಿದರೆ ಅವರು ರಂಗೋಲಿ ಕೆಳಗಡೆ ನುಗ್ಗುತ್ತಾರೆ.

ಶ್ರೀ ಸಿ.ಎಂ.ಉದಾಸಿ: ಡಿಸ್‌ಕ್ರೆಷನ್ ಇದ್ದರೆ ಮಿನಿಮೈಜ್ ಮಾಡಬಹುದು.

ಶ್ರೀ ಸಿದ್ದರಾಮಯ್ಯ:– ಡಿಸ್‌ಕ್ರಿಶನ್, ಲೈಫ್ ಇಂಪ್ರಿಜನ್‌ಮೆಂಟ್ ಕೊಡುವುದಕ್ಕೂ ಇದೆ, ಡೆತ್ ಇಂಪ್ರಿಜನ್‌ಮೆಂಟ್ ಕೊಡುವುದಕ್ಕೂ ಇದೆ. ಅದನ್ನೇ ತೆಗೆದು ಹಾಕಿಬಿಡಿ ಅಂದರೆ . . . . .

ಶ್ರೀ ಸಿ.ಎಂ. ಉದಾಸಿ:– ಹಾಗಲ್ಲ, ತನಿಖಾಧಿಕಾರಿಗಳು 5 ಸಾವಿರ ರೂಪಾಯಿಗಳವರೆಗೆ ಎಂದು ಇದೆ . . . . .

ಶ್ರೀ ಸಿದ್ದರಾಮಯ್ಯ:– ಅಧಿಕಾರಿಗಳ ಕೈಯಲ್ಲಿಯೇ ಹಾಕಿಸಬೇಕು ಇನ್ನೇನು ನಾನು ಹಾಕುವುದಕ್ಕೆ ಆಗುತ್ತದೆಯೇ? ನೀವು ಹಾಕುವುದಕ್ಕೆ ಆಗುತ್ತದೆಯೇ ಅವರ ಮೂಲಕವೇ ಮಾಡಿಸಬೇಕು.

ಶ್ರೀ ಸಿ.ಎಂ. ಉದಾಸಿ:– 5 ಸಾವಿರ ರೂಪಾಯಿಗಳಿಗೆ ಬದಲಾಗಿ ಒಂದು ಸಾವಿರ ರೂಪಾಯಿ ಎಂದು ಇಡಿ. ಫಿಕ್ಸ್ ಮಾಡಿದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ:– ಡಿಪೆಂಡಿಂಗ್ ಆಫ್ ಅನ್ ದಿ ನೇಚರ್ ಆಫ್ ದಿ ಅಫೆನ್ಸ್ ಮಾಡುತ್ತಾರೆಯೇ ಹೊರತು ಸಿಕ್ಕಿ ಸಿಕ್ಕಿದವರಿಗೆಲ್ಲಾ ಮಾಡುವುದಕ್ಕೆ ಆಗುತ್ತದೆಯೇ? ನೇಚರ್ ಆಫ್ ಅನ್ ದಿ ಅಫೆನ್ಸ್ ಅದರ ಮೇಲೆ ಶಿಕ್ಷೆಯಾಗುತ್ತದೆ. ಅದನ್ನು ಪರಿಶೀಲನೆ ಮಾಡುತ್ತೇನೆ, ನೋಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇನ್ನೊಂದು ಕ್ಲಾರಿಫಿಕೇಶನ್ ಈಗ ಪೆಟ್ರೋಲ್ ಡೀಸೆಲ್ ಇದನ್ನೆಲ್ಲಾ ನೀವು ಜೀರೋ ರೇಟ್‌ನಲ್ಲಿ ತೋರಿಸಿಬಿಟ್ಟಿದ್ದೀರಿ. ಅವು . . . . .

ಶ್ರೀ ಸಿದ್ದರಾಮಯ್ಯ:– ಇಲ್ಲ ಅವು ವ್ಯಾಟ್ ವ್ಯಾಪ್ತಿಗೆ ಬಂದಿಲ್ಲ.

ಶ್ರೀ ಜೆ ಸಿ ಮಾಧುಸ್ವಾಮಿ:– ವ್ಯಾಟ್ ವ್ಯಾಪ್ತಿಗೆ ಬಂದಿಲ್ಲವೆಂದರೆ ನೀವು, you will be losing around Rs.2000 crores. ನನ್ನ ಮಾಹಿತಿ ಪ್ರಕಾರ 2 ಸಾವಿರ ಕೋಟಿ ರೂ.ಯಷ್ಟು ನಷ್ಟವಾಗಬಹುದು. ಪೆಟ್ರೋಲ್, ಡೀಸಲ್ ಮೇಲೆ ತೆರಿಗೆ ಏನಿದೆ.

ಶ್ರೀ ಸಿದ್ದರಾಮಯ್ಯ:– ಇಲ್ಲ ಇಲ್ಲ. We are going to levy tax on petrol, diesel.

ಶ್ರೀ ಜೆ ಸಿ ಮಾಧುಸ್ವಾಮಿ:– ಎಷ್ಟು ಹಾಕುತ್ತೀರಿ?

ಶ್ರೀ ಸಿದ್ದರಾಮಯ್ಯ:– ಈಗ ಪೆಟ್ರೋಲ್ ಮೇಲೆ 28 ಪರ್ಸೆಂಟ್ ಇದೆ. ಡೀಸೆಲ್ ಮೇಲೆ 20 ಪಸೆಂಟ್ ಇದೆ. ಬೇರೆ ಬೇರೆ ರಾಜ್ಯಗಳವರು ಹೇಗೆ ಮಾಡುತ್ತಾರೆಂದು ನೋಡಿಕೊಂಡು ಮಾಡುತ್ತೇವೆ. ಇಲ್ಲದಿದ್ದರೆ, ನಾವು ಒಂದು ವೇಳೆ ಇದನ್ನೇ ಮುಂದುವರಿಸಬಹುದು.

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಮಗೆ ಬಹಳ ಆಸೆ ಇದ್ದದ್ದು ಈ ವ್ಯಾಟಿದು ತಮಿಳುನಾಡಿನ ಲೆವಲ್‌ಗೊ ಅಥವಾ ಗೋವ ಲೆವೆಲೆಗೊ ಈ ಪೆಟ್ರೋಲ್, ಡಿಸೆಲ್ ಹೋಗುತ್ತದೆಂದು ತಿಳಿದು ಕೊಂಡಿದ್ದೆವು.

ಶ್ರೀ ಸಿದ್ದರಾಮಯ್ಯ: ಅವರು ಎಷ್ಟು ಮಾಡುತ್ತಾರೋ ನಮಗೆ ಗೊತ್ತಿಲ್ಲ. ತಮಿಳುನಾಡಿನಲ್ಲಿ 30 ಪರ್ಸೆಂಟ್ ಟ್ಯಾಕ್ಸ್ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅವರಿಗೆ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಉಳಿಯುತ್ತದೆ.

ಶ್ರೀ ಸಿದ್ದರಾಮಯ್ಯ: ಅಲ್ಲಿ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಕಡಿಮೆ, ನಮಗೆ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಜಾಸ್ತಿ, ಹಾಗಾಗಿ ನಮ್ಮದು 44 ರೂಪಾಯಿ ಜಾಸ್ತಿಯಾಗಿ ಕಾಣುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆಂಧ್ರಪ್ರದೇಶದಲ್ಲೂ ಕಡಿಮೆ, ಇದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಎಲ್ಲಾ ಕಡೆ ಕಡಿಮೆ ಇದೆ, ಇಲ್ಲಿ ಒಂದು ಲೀಟರ್ 50 ಪೈಸೆ ಜಾಸ್ತಿ ಇದೆ; ಕರ್ನಾಟಕದಲ್ಲಿ ಒಂದು ರೂಪಾಯಿ ಪೆಟ್ರೋಲ್ ಬೆಲೆ ಜಾಸ್ತಿಯಾಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆಂಧ್ರಪ್ರದೇಶಕ್ಕೂ ನಮಗೂ ಒಂದು ರೂಪಾಯಿಗಳ ವ್ಯತ್ಯಾಸ ಇದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಆಮೇಲೆ , ಸೇಲ್ಸ್ ಮೇಲೆ ನೇರವಾದ ಪರಿಣಾಮವಾಗಿದೆ, ಕರ್ನಾಟಕದಿಂದ ಚೆನ್ನೈಗೆ ಹೋಗುವ ಎಲ್ಲಾ ಲಾರಿಗಳು ಕರ್ನಾಟಕದಿಂದ ಅಲ್ಲಿಗೆ ಹೋಗಿ ತುಂಬಿಸಿಕೊಂಡು ಹೋಗುತ್ತಾರೆ, ವಾಪಸ್ ಬರುತ್ತಾರೆ. ಏನಾದರೂ ಒಂದು ತೀರ್ಮಾನವನ್ನು ತಾವು ಹೇಳಿ, ಟ್ಯಾಕ್ಸ್ ಅನ್ನು ಆ ಲೆವಲ್‌ಗೆ ತರಬೇಕಲ್ಲಾ.

ಶ್ರೀ ಸಿದ್ದರಾಮಯ್ಯ:– ತಾವು ಹೇಳುವುದು, ನಿಜ, ಈಗ ಆಯಾ ರಾಜ್ಯಗಳೂ ಟ್ಯಾಕ್ಸ್ ಫಿಕ್ಸ್ ಮಾಡಿಕೊಳ್ಳುತ್ತಿದ್ದಾರೆ, ಅವರು 1.4.2005ರಿಂದ ಏನು ಮಾಡುತ್ತಾರೆ? ತೆರಿಗೆಯನ್ನು ಮತ್ತೆ ಏನಾದರೂ ಬದಲಾವಣೆ ಮಾಡುತ್ತಾರೆಯೆ? ನಾವೂ ಕೂಡ ಅವರೊಡನೆ ಚರ್ಚೆ ಮಾಡುತ್ತೇವೆ, ಮತ್ತೆ ಎಂಪೌವರ್ ಕಮಿಟಿ ಈ ತಿಂಗಳು ಇದೆ, ಬೆಂಗಳೂರಿನಲ್ಲಿರುವ ಪೆಟ್ರೋಲ್, ಡಿಸೆಲ್ ಬೆಲೆಯನ್ನು ಇರುವ ಬೆಲೆಯಲ್ಲೇ ಮುಂದುವರೆಸುತ್ತಾರೆಯೇ ಅಥವಾ ಬದಲಾವಣೆ ಮಾಡುತ್ತಾರೆಯೇ ಎಂಬುದನ್ನು ಅವರೊಡನೆ ಚರ್ಚೆ ಮಾಡುತ್ತೇವೆ; ನಂತರ ಒಂದು ತೀರ್ಮಾನಕ್ಕೆ ಬರುತ್ತೇವೆ. ಅದೇನೂ ಮಾಡದೆ ನಾನು ಈಗಲೇ ಹೇಳುವುದಕ್ಕಾಗುವುದಿಲ್ಲ. ಅವರು ವ್ಯಾಟ್ ಇಂಟ್ರೊಡ್ಯೂಸ್ ಮಾಡುವಾಗ, ಉತ್ತರಪ್ರದೇಶ ರಾಜ್ಯ ಬಿಟ್ಟರೆ, ಬೇರೆ ಎಲ್ಲಾ ರಾಜ್ಯಗಳೂ ಕೂಡ ಒಪ್ಪಿಕೊಂಡಿವೆ, ದಕ್ಷಿಣ ರಾಜ್ಯದಲ್ಲಿರುವ ನಮ್ಮ ಎಲ್ಲಾ ರಾಜ್ಯಗಳು ಒಪ್ಪಿಕೊಂಡಿವೆ. ಅವರು ವ್ಯಾಟ್ ಅನ್ನು 1.4.2005ರ ರಿಂದ ಜಾರಿಗೆತರುವಾಗ, ಈಗ ಇರುವ ರೇಟ್‌ಗಳನ್ನೇ ಮುಂದುವರೆಸುತ್ತಾರೆಯೋ, ಇಲ್ಲವೇ ಕಡಿಮೆ ಮಾಡುತ್ತಾರಾ ಹೆಚ್ಚು ಮಾಡುತ್ತಾರಾ ಎನ್ನುವುದನ್ನು ನೋಡಿಕೊಂಡು ನಾವು ಕೂಡ ಅದನ್ನು ಪರಿಶೀಲನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ . .

ಶ್ರೀ ಬಿ.ನಾಗರಾಜ ಶೆಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ಆರ್ಥಿಕ ಮಂತ್ರಿಗಳಿಗೆ, ಈ ವ್ಯಾಟ್ ಇಂಟ್ರೊಡ್ಯೂಸ್ ಆಗುವಾಗ, ಕೃಷಿ ಉತ್ಪನ್ನಗಳಿಗೆ ಶೇಕಡ 4ರಷ್ಟು ತೆರಿಗೆ ಎಂದು ತಿಳಿಸಿದ್ದಾರೆ, ನಮ್ಮ ಅಡಿಕೆಯು ಕೂಡ ಅದರಲ್ಲಿ ಬರುತ್ತದೆಯೆ ಎಂಬ ಬಗ್ಗೆ ಸ್ಪಷ್ಟನೆ ಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ:– ಅದಕ್ಕೂ ನಾಲ್ಕು ಪರ್ಸೆಂಟ್, ಈಗ ಮಾಧುಸ್ವಾಮಿಯವರ ಪ್ರಶ್ನೆ ಏನೆಂದರೆ, ನೀವು ಕೂಡ ಬೇರೆ ರಾಜ್ಯದಷ್ಟಕ್ಕೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ, ಅದು ನಿಮ್ಮ ಪ್ರಶ್ನೆ ತಾನೆ? ಅದರ ಬಗ್ಗೆ ಸ್ಪಷ್ಟನೆಯನ್ನು ನಾವು ಈಗಲೆ ಹೇಳಲಾಗುವುದಿಲ್ಲ, ಏಕೆಂದರೆ, ಈಗ ಇರುವ ಪದ್ಧತಿಯ ಪ್ರಕಾರ, ನಾನು ಆಗಲೇ ಹೇಳಿದಂತೆ ಅವರು 30 ಪರ್ಸೆಂಟ್ ಇಟ್ಟುಕೊಂಡಿದ್ದಾರೆ, ಟ್ರಾನ್ಸ್‌ಪೋರ್ಟ್ ಚಾರ್ಜಸ್ ಕಡಿಮೆಯಾಗುವುದರಿಂದ ಅವರಿಗೆ ಒಟ್ಟಾಗಿ ಎಫೆಕ್ಟೀವ್ ರೇಟ್ ಕಡಿಮೆಯಾಗುತ್ತದೆ ಎಂದು ಹೇಳಿದ್ದೇನೆ, ನಾವು ಅದನ್ನು ಸರಿದೂಗಿಸಿಕೊಳ್ಳಬೇಕಾದರೆ, ಅವರೇನಾದರೂ ಮತ್ತೆ ಚೇಂಜ್ ಮಾಡುತ್ತಾರೆಯೇ, ಕಡಿಮೆ ಮಾಡುತ್ತಾರೆಯೇ, ಅಥವಾ ಹೆಚ್ಚು ಮಾಡುತ್ತಾರೆಯೇ ಎಂಬುದನ್ನು ನೋಡಿಕೊಂಡು, ನಾವು ಅವರೊಡನೆ ಚರ್ಚೆಮಾಡಿ ಬಂದು ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ.

ಮಾನ್ಯ ಸದಸ್ಯ ಪಕ್ಕದ ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ವಾಹನ ಖರೀದಿ ಕಾಲಕ್ಕೆ ಶೇಕಡ 4 ಮತ್ತು 3ರಷ್ಟು ತೆರಿಗೆ ಇದೆ, ನಮ್ಮಲ್ಲಿ 13.8 ಪರ್ಸೆಂಟ್ ಟ್ಯಾಕ್ಸ್ ಇದೆ, ಆದಕಾರಣ, ಅದಕ್ಕೆ ಸರಿದೂಗಿಸಿದರೆ ಸರಿಹೋಗುತ್ತದೆ, ಇಲ್ಲವೆಂದರೆ, ನಮ್ಮ ಗಡಿಪ್ರದೇಶದಲ್ಲಿರುವವರು ಗೋವಾ ಅಥವಾ ಮಹಾರಾಷ್ಟ್ರಕ್ಕೆ ಹೋಗಿ ವಾಹನ ಖರೀದಿ ಮಾಡುವುದರಿಂದ ಕರ್ನಾಟಕ ರಾಜ್ಯಕ್ಕೆ ನಷ್ಟವಾಗುತ್ತದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಹಾರಾಷ್ಟ್ರದಲ್ಲಿ ವಾಹನ ಖರೀದಿ ಮಾಡಿದ ವಾಹನದ ಟ್ಯಾಕ್ಸ್ ರಿಸೀಟ್ ಕೂಡ ನನ್ನಲ್ಲಿದೆ.

ಶ್ರೀ ಸಿದ್ಧರಾಮಯ್ಯ:– 1.4.2005ರಿಂದ ಏಕ ರೂಪದ ತೆರಿಗೆ ಪದ್ಧತಿ ಬಂದಮೇಲೆ ಗೋವಾ, ತಮಿಳುನಾಡು ಮತ್ತು ಮಹಾರಾಷ್ಟ್ರಕ್ಕೂ ನಮಗೂ ಈ ವ್ಯತ್ಯಾಸಗಳೇನು ಇರುವುದಿಲ್ಲ, ನಾಲ್ಕು ರೇಟ್‌ನಲ್ಲಿ 270 ಐಟಮ್‌ಗಳನ್ನೇನು ನಾವು ಒಪ್ಪಿಕೊಂಡಿದ್ದೇವೆ. ಅದಕ್ಕೆಲ್ಲಾ ಏಕರೂಪದ ತೆರಿಗೆ ಇರುತ್ತದೆ.

ಶ್ರೀ ಎಸ್.ಯೋಗಿಶ್ ಭಟ್: ಮಾನ್ಯ ಸಚಿವರು, ಈ ಚೆಕ್‌ಪೋಸ್ಟ್ ಮಾಡರ್ನೈಜೇಷನ್ ಬಗ್ಗೆ ತಾವು ಹೇಳಬೇಕು.

ಶ್ರೀ ಸಿದ್ಧರಾಮಯ್ಯ: ಈಗ ಚೆಕ್‌ಪೋಸ್ಟ್ ಮಾಡರ್ನೈಜೇಷನ್ ನಡೆಯುತ್ತಿದೆ, ಎರಡು ಚೆಕ್ ಪೋಸ್ಟ್‌ಗಳನ್ನು ಮಾಡಲು ಇನ್ನೂ ಕೆಲಸ ಆರಂಭವಾಗಬೇಕು, ನೀವು ಹೇಳಿದ ಸಲಹೆಯನ್ನು ಕೂಡ ಆ ವಿಷಯದಲ್ಲಿ ಗಂಭೀರವಾಗಿ ಆಲೋಚನೆ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಚೆಕ್‌ಪೋಸ್ಟ್‌ನಲ್ಲಿ ನೀವು ಲಾರಿಯನ್ನು ತೆಗೆದುಕೊಂಡು ಹೋಗಬೇಕಾದರೆ ಬಿಲ್ ತೋರಿಸಬೇಕೆಂದು ತಾವು ಹೇಳಿದ್ದಿರಿ, ಖಾಲಿ ಬಿಲ್ ಹೋಗುತ್ತದೆ, ನಿಮ್ಮವರನ್ನು ಹಿಡಿದುಕೊಂಡರೆ ಎಂಟ್ರಿಯಾಗುತ್ತದೆ, ಅಲ್ಲಿಂದ ಎಸ್‌ಟಿಡಿ ಮೆಸೇಜ್ ಪಾಸ್ ಆಗುತ್ತದೆ. ಅದಕ್ಕೆ ಎಲ್ಲಿಂದ ವೆಹಿಕಲ್ ಲೋಡ್ ಆಗಿರುತ್ತದೆ ಅಲ್ಲಿಯ ಬಿಲ್ ಆಗಬೇಕೆನ್ನುವ ಒಂದು ವ್ಯವಸ್ಥೆಯನ್ನು ಪರಿಚಯಿಸುತ್ತೀರಾ? ನಿಮ್ಮ ಲಾರಿಯಲ್ಲಿ ಡೆಲಿವರಿ ನೋಟ್ ಖಾಲಿ ಹೋಗುತ್ತದೆ, ಅಲ್ಲಿ ಹಿಡಿದುಕೊಂಡರೆ ಲಾರಿ ನಂಬರ್ ಎಂಟ್ರಿಯಾಗುತ್ತದೆ, ಇಲ್ಲದಿದ್ದರೆ ಹಾಗೆ ಹೋಗಿಬಿಡುತ್ತದೆ, ಎಲ್ಲಿ ಅದು ತುಂಬಿ ಹೊರಟಿತ್ತು ಇಲ್ಲಿ ಅಲ್ಲಿ ಸೈಮಲ್ಟೇನಿಯಸ್ ಆಗಿ ಏನಾದರೂ ಒಂದು ಫಾರಂ ಇನ್‌ಸಿಸ್ಟ್ ಮಾಡಿ ಬಿಲ್ ಅನ್ನು ಪ್ರೊಡ್ಯೂಸ್ ಮಾಡುವ ವ್ಯವಸ್ಥೆ ತರುವುದಕ್ಕಾಗುತ್ತದೆಯೇ?

ಶ್ರೀ ಸಿದ್ದರಾಮಯ್ಯ: ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ, ಅದು ಅಗತ್ಯವಿದ್ದರೆ ಮಾಡುತ್ತೇವೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 28ರವರೆಗೆ

ಪ್ರಸ್ತಾವಏನೆಂದರೆ:–

ಅಧ್ಯಕ್ಷರು: "ಖಂಡ 2 ರಿಂದ 28ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ...

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 28 ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು), ಖಂಡ–1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ. . .

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾಪ ಅಂಗೀಕಾರ

ಶ್ರೀ ಸಿದ್ದರಾಮಯ್ಯ(ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ "2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

4. ವಿತ್ತೀಯ ಕಾರ್ಯಕಲಾಪಗಳು

2004–05ನೇ ಸಾಲಿನ ಪೂರಕ ಅಂದಾಜುಗಳು (ಎರಡನೆಯಕಂತು)

ಶ್ರೀ ಸಿದ್ದರಾಮಯ್ಯ(ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 205(1)ನೇ ಅನುಚ್ಛೇದ ಮೇರೆಗೆ 2004–05ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೆಯ ಕಂತು_ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ. ದಿ:31.3.2005ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆಗಳ ಕ್ರಮಾಂಕ:1, 3 ರಿಂದ 10, 13, 15, 17, 18, 20, 21, 22 ಹಾಗೂ 27ಕ್ಕೆ ಸಂಬಂದಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು, ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿರುವ 93973.07 ಲಕ್ಷ ರೂ.ಗಳ ಮೊಬಲಗು ಸೇರಿ, ಬೇಡಿಕೆಯ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಿಗೆ ಮೀರದ ಮೊತ್ತವನ್ನು ಈ ಸಭೆ ಮಂಜೂರು ಮಾಡಬೇಕೆಂದು ಕೋರುತ್ತೇನೆ.